# ಎಳೂರು ದೇವರ ಕಾಳಗ



ರಾಜಪ್ಪ ದಳವಾಯಿ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು-೫೬೦ ೦೦೨

## ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಕಟಣೆ

# ಏಳೂರು ದೇವರ ಕಾಳಗ

ಪ್ರಧಾನ ಸಂಪಾದಕ

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕ

ರಾಜಪ್ಪ ದಳವಾಯಿ

# ಏಳೂರು ದೇವರ ಕಾಳಗ

(ಜನಪದ ಕಾವ್ಯ)


ಪ್ರಧಾನ ಸಂಪಾದಕರು

ಡಾ. ಜೀ. ಶಂ. ಪರಮಶಿವಯ್ಯ

ಸಂಪಾದಕರು

ರಾಜಪ್ಪ ದಳವಾಯಿ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ನೃಪತುಂಗ ರಸ್ತೆ : ಬೆಂಗಳೂರು-೫೬೦ ೦೦೧

YEELUURU DEVARA KALAGA (A Folk Narrative Verse)- Collected and Edited by Sri Rajappa Dalavayi. Published by The Registrar, Karnataka Janapada and Yakshagana Aca- demy, Nrupatunga Road, Bangalore-560 002. Pp. X+72. Price: 15-00.

First Edition : 1994

ಹಕ್ಕುಗಳು : ಸಂಪಾದಕರವು

ಬೆಲೆ : ರೂ.೧೫-೦೦

ರಕ್ಷಾಪುಟ ಕಲೆ : ಕನಕೇಶ ಮೂರ್ತಿ

ಮುದ್ರಕರು : ಎ. ಜಿ. ಸುವ್ರತೀಂದ್ರ

ವಾಣೀ ಪ್ರೆಸ್ : ಚಾಮರಾಜಪುರಂ : ಮೈಸೂರು-೫೭೦ ೦೦y here 7

# ಪ್ರಧಾನ ಸಂಪಾದಕರ ಮಾತು

ಕನ್ನಡದಲ್ಲಿ ಜನಪದ ಕಾವ್ಯಗಳ ಪರಿವೀಕ್ಷಣೆ ಈಗಾಗಲೆ ಸಾಕಷ್ಟು ನಡೆದಿದೆ. ಅನೇಕ ಸಂಪ್ರದಾಯದ ಕಾವ್ಯಗಾಯಕರು ನಮ್ಮ ಅಪೂರ್ವ ಜನಪದ ಕಾವ್ಯ ಸಂಪತ್ತನ್ನು ಸಂಗ್ರಾಹಕರ ಮೂಲಕ ಅನಾವರಣಗೊಳಿಸಿದ್ದಾರೆ. ಈ ಕಾವ್ಯಗಳಲ್ಲಿ ಧಾರ್ಮಿಕ ಕಾವ್ಯ ಗಳು, ಲೌಕಿಕ ಕಾವ್ಯಗಳು ಸೇರಿವೆ. ಅಪಾರ ಸಮೃದ್ಧಿಯ ಈ ಜನಪದ ಕಾವ್ಯಲೋಕ ದಿಂದ ಇನ್ನೂ ಹೊಸ ಹೊಸ ರಚನೆಗಳು ಬೆಳಕಿಗೆ ಬರುತ್ತಿವೆ. ಕರ್ಣಾಟಕದ ತರುಣ ಪೀಳಿಗೆಯ ಜನಪದ ಉತ್ಸಾಹಿಗಳು ಈ ನಿಟ್ಟಿನಲ್ಲಿ ಸ್ತುತ್ಯವಾದ ಪ್ರಯತ್ನವನ್ನು ಮಾಡುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತಂತೆ ಹೇರಳವಾದ ಕಾವ್ಯಗಳು ಕಂಡುಬರುತ್ತವೆ. ಜನಾಂಗದ ವೀರಪುರುಷರಿಗೆ ಸಂಬಂಧಪಟ್ಟ ವೀರಕಾವ್ಯಗಳು ಇವೆ. ಅನೇಕ ಬಗೆಯ ತ್ಯಾಗ ಬಲಿದಾನದ ಕಥೆಗಳು ಇವೆ. ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆ ವಿಧಿಗಳಲ್ಲಿ ಈ ಕಾವ್ಯಗಳನ್ನು ಪವಿತ್ರ ಕಾವ್ಯಗಳೆಂದು ಪರಿಗಣಿಸಿ, ಉಳಿಸಿ ಕೊಂಡು ಬಂದ ಪರಂಪರೆ ಇದೆ. ಈ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಅಂಶಗಳು ಸೇರಿರುತ್ತವೆ. ಇಂತಹ ಒಂದು ಶ್ರೇಷ್ಠ ಕಾವ್ಯಗಳ ಸಾಲಿಗೆ ಏಳೂರು ದೇವರ ಕಾಳಗ ಕೂಡ ಸೇರಿರುತ್ತದೆ. ತರುಣ ವಿದ್ವಾಂಸ ರಾದ ಶ್ರೀ ರಾಜಪ್ಪ ದಳವಾಯಿಯವರು ಕೆಲವು ವರ್ಷಗಳ ಹಿಂದೆ ಈ ಕಾವ್ಯದ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಸಾಂಸ್ಕೃತಿಕ ಮಹತ್ವದ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಅದರ ಸಂಪ್ರದಾಯವನ್ನು ಗುರುತಿಸಬೇಕೆಂದು ಅವರೊಡನೆ ನಾನು ಮಾತನಾಡಿದ್ದೆ. ಶ್ರೀಯುತರು ಈ ಕಾವ್ಯದ ಮೂಲ ಚೂಲಗಳನ್ನೆಲ್ಲ ಹುಡುಕಿ ಸಾಧ್ಯ ವಾದ ಮಟ್ಟಿಗೂ ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

ಈ ಕಾವ್ಯವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ವಾಣೀ ಪ್ರೆಸ್‌ನ ಶ್ರೀ ಎ. ಜಿ. ಸುವ್ರತೀಂದ್ರ ಅವರಿಗೂ ರಕ್ಷಾಪುಟದ ಆಕರ್ಷಕ ಕಲೆಯನ್ನು ಬಿಡಿಸಿಕೊಟ್ಟ ತರುಣ ಕಲಾವಿದ ಕನಕೇಶ ಮೂರ್ತಿಯವರಿಗೂ ಕರಡು ತಿದ್ದುವುದರಲ್ಲಿ ನೆರವಾದ ಡಾ. ಅಕ್ಕಮಹದೇವಿಯವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

**ಜೀ. ಶಂ. ಪರಮಶಿವಯ್ಯ**

ಅವ್ವ

ಹನುಮಕ್ಕ

ಅಪ್ಪ

ರಾಮಣ್ಣ

ಅವರುಗಳಿಗೆ ಈ ಕೃತಿ ಅರ್ಪಿತ

# ನನ್ನೆರಡು ಸೊಲ್ಲುಗಳು....

ನಾನು ಸಣ್ಣವನಿದ್ದಾಗ ಕೇಳುತ್ತಿದ್ದ ಜನಪದ ಹಾಡು, ಕತೆಗಳಲ್ಲಿ ಈ ಏಳೂರು ದೇವರ ಕಾಳಗವೂ ಒಂದು. ಇದಕ್ಕೆ ಕಾಳಗದ ಪದ ಎಂದೂ ಕರೆಯುತ್ತಾರೆ. ಅಲ್ಲಲ್ಲಿ ಹಾಡಾಗಿ ಹೆಚ್ಚು ಕಥೆಯಾಗಿ ಇಂದಿಗೂ ನನ್ನೂರಿನಲ್ಲಿ ಬಹಳಷ್ಟು ಜನಕ್ಕೆ ಗೊತ್ತಿರುವ ಕಥೆ ಇದಾಗಿದೆ. ಶಿವನಿ ಸುತ್ತಮುತ್ತಲ ಪ್ರಾಂತದ ಕುರುಬರಲ್ಲಿ ಪ್ರಚಲಿತವಿರುವ ಈ ಲಾವಣಿ ಒಂದು ವೀರಗಾಥೆ, ಇದು ಒಂದು ಜನಾಂಗೀಯ ಉದ್ದೇಶಕ್ಕಾಗಿಯೆ ಹುಟ್ಟಿ ಬೆಳೆದು ಬಂದಿರುವಂಥದ್ದು. ಮುಖ್ಯವಾಗಿ ಕುರುಬರಲ್ಲಿರುವ ಒಳಸಂಬಂಧಿ ಕುಲಾಚಾರಗಳಿಗೆ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸುವುದಷ್ಟೆ ಅಲ್ಲದೆ ಇಲ್ಲಿ ಹೇಳಿರುವ ಆಚರಣೆ ಗಳಲ್ಲಿ ಕೆಲವು ಇಂದಿಗೂ ಜೀವಂತ ಇರುವುದನ್ನು ಗಮನಿಸಿದರೆ ಇದೊಂದು ಐತಿಹಾಸಿಕ ವಸ್ತು ಎಂಬುದರಲ್ಲಿ ಸಂದೇಹವಿಲ್ಲ.

ತಾಳೀಕಟ್ಟೆ ಹಿರಿಯಯ್ಯನ ಒಕ್ಕಲೊಂದು ಚನ್ನಗಿರಿ ಆಚೆಗಿರುವ ಆನವೇರಿಗೆ ಚದುರಿ ಹೋಗಿರುವಾಗ, ಹಿರಿಯಯ್ಯ ತನ್ನ ಬೆಸಮಗನನ್ನು ಕರೆದು, ಹೋದ ಒಕ್ಕಲನ್ನು ನೋಡಿ ಬಾ ಎಂದು ಕಳಿಸಿದರೆ ಆತ ಆ ಒಕ್ಕಲ ಹಿರಿಯನ ತಲೆಯನ್ನೇ ಕತ್ತರಿಸಿ ತಂದು ಆನವೇರಿ ಸಿದ್ದಯ್ಯ ಮತ್ತವನ ಹಿಂಬಾಲಕರ ಕೋಪಕ್ಕೆ ಗುರಿಯಾಗಿ ಗಡಿನಾಡ ವ್ಯಾಜ್ಯವನ್ನು ಕೆಣಕಿ ಬಂದ ಸಲುವಾಗಿ ತಾಳೀಕಟ್ಟಿ ಹಿರಿಯಯ್ಯ, ಆನವೇರಿ ಸಿದ್ದಯ್ಯ, ದುಮ್ಮಿ ಸಿದ್ದಯ್ಯ (ಮೋಟುಬಳು ಚಿಕ್ಕಣ್ಣ ಎಂಬುದು ಇವನ ಇನ್ನೊಂದು ಹೆಸರು, ಬನಿಹಟ್ಟಿ ಸಿದ್ದಯ್ಯ ಮುಂತಾದವರೆಲ್ಲ ಹೊನ್ನೇಬಾಗಿ ದಿಬ್ಬದಲ್ಲಿ ಪಂಚಾಯಿತಿ ಮಾಡು ತಿರುವಾಗ, ಹೋದ ಒಕ್ಕಲನ್ನು ಬಿಡದಿದ್ದ ಹಿರಿಯಯ್ಯನ ಬಲಗೆಪ್ಪೆಯನ್ನು ಮೋಟು ಬಳ್ಳು ಚಿಕ್ಕಣ್ಣ ಕಡಿಯಲಾಗಿ, ಪ್ರಜ್ಞೆ ತಪ್ಪಿ ಬಿದ್ದ ಹಿರಿಯಯ್ಯನ ಸುದ್ದಿ ತಿಳಿದು ಆತನ ಏಳುಜನ ತಮ್ಮಂದಿರೂ ಬಂದು ಆನವೇರಿ ಸಿದ್ದಯ್ಯನ ಸೊಕ್ಕು ಮುರಿದು ಬ್ಯಾಲನೂರ ಕುಟುಂಬದ ಆ ಒಂದು ಒಕ್ಕಲನ್ನು ಆನವೇರಿಯಿಂದ ತಾಳೀಕಟ್ಟೆಗೆ ಕರೆದು ತರುವ ವಿವರ ಈ ಲಾವಣಿಯಲ್ಲಿ ನಿರೂಪಿತವಾಗಿದೆ.

ಇದು ಮುಖ್ಯವಾಗಿ ವೀರರಸಪ್ರಧಾನವಾದ ಲಾವಣಿಯಾಗಿದ್ದು ಏಳೂರಿಗೆ ಸಂಬಂಧಿ ಸಿದ ದೇವರುಗಳ, ಕುರುಬರ ಒಳಪಂಗಡಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ. ಇದರಲ್ಲಿ ಬಳಕೆಯಾಗಿರುವ ಊರು, ವ್ಯಕ್ತಿ, ಸ್ಥಳ ಮತ್ತು ಘಟನೆಗಳು ಇಂದಿಗೂ ಜೀವಂತಿಕೆ ಪಡೆದವಾಗಿರುವುದರಿಂದ ಇದೊಂದು ಪ್ರಾದೇಶಿಕ ಆಶೋತ್ತರಗಳನ್ನು ತುಂಬಿಕೊಂಡಿರುವ ಜನಪದ ವೀರಕಾವ್ಯ ಎನಿಸುತ್ತದೆ. 'ಪಿರಿಯಾಪಟ್ಟಣ ಕಾಳಗ'ದ ಕತೆಗೆ ಹೆಚ್ಚು ಸಮೀಪವಿರುವ ಈ ಲಾವಣಿ ಒಂದು ಪ್ರದೇಶದ ಐತಿಹಾಸಿಕ ವಸ್ತು ವಾದಂತೆಯೇ ಒಂದು ಜಾತಿಯ ಸಾಂಸ್ಕೃತಿಕ ವಿಚಾರಗಳನ್ನು ಸಹ ಬಿಂಬಿಸುವ ಶಕ್ತಿ

ಯನ್ನು ಪಡೆದಿದೆ. ಕುರುಬರ ಸಂಸ್ಕೃತಿಯ ಸಾಕಷ್ಟು ವಿಷಯಗಳು ಇಲ್ಲಿ ದಾಖಲಾಗಿವೆ. ಅಷ್ಟೇ ಅಲ್ಲ ಅವು ಇಂದಿಗೂ ಜೀವಂತವಾಗಿವೆ. ಇದು ಹಲವು ಒಕ್ಕಲುಗಳ ನಡುವೆ ನಡೆಯುವ ಒಂದು ಸಂಘರ್ಷವಾಗಿಯೂ ಬಿಂಬಿತವಾಗಿದೆ. ಯಾವುದೇ ಇತಿಹಾಸವಿಲ್ಲದ ಈ ಪ್ರದೇಶದ ಕುರುಬರಿಗೆ ಇದೊಂದು ಸಾಂಸ್ಕೃತಿಕ ಘನತೆಯೇ ಆಗಿದೆ. ಆದ್ದರಿಂದ ಈ * ಬಡಕಟ್ಟುಗಳಲ್ಲಿ ಈ ಕತೆ ಒಂದಿಲ್ಲೊಂದು ರೂಪದಲ್ಲಿ ಜೀವಂತವಾಗಿದೆ.

ಈ ಲಾವಣಿಯಲ್ಲಿ ಹಲವು ಬಗೆಯ ಜನಪದ ಮಟ್ಟುಗಳು ಬಳಕೆಯಾಗಿವೆ. ಮುಮ್ಮೇಳ ಮತ್ತು ಹಿಮ್ಮೇಳದ ಜೊತೆ ನಡೆಯುವ ಈ ವೀರಗಾಥೆಗೆ ಅದರದೇ ಆದ ಐತಿಹ್ಯಗಳೂ ಇವೆ. ಇದನ್ನು ದೇವಸ್ಥಾನದಲ್ಲಲ್ಲದೆ ಬೇರೆಡೆ ಹಾಡಬಾರದು. ಇದನ್ನು ಕೇಳುತ್ತಿದ್ದರೆ ಏಳೂರಿನ ಯಾವ ದೇವರಾದರೂ ತನ್ನ ತೊಗೊ ಮಂಚದಲ್ಲಿ ತೂಗಾಡು ತಿರುತ್ತದೆ, ಎಂಬಿತ್ಯಾದಿ ನಂಬಿಕೆಗಳು ಬಳಕೆಯಲ್ಲಿವೆ. ಈ ಲಾವಣಿಗೆ ಅದರದೇ ಆದ ಒಂದು ದೈವಿಕತೆಯನ್ನು ಜನ ಹೊರಿಸಿದ್ದಾರೆ. ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ ಈ ಏಳೂರುಗಳ ದೇವರ ಜಾತ್ರೆಗಳೂ ಬಹಳ ಪ್ರಸಿದ್ಧವಾದವು. ಇಲ್ಲಿ ಕುರುಬರ ಹಲವು ಬುಡಕಟ್ಟುಗಳ ಸಮ್ಮೇಳನದ ಒಂದು ಸಾಕ್ಷಿಯಾಗಿರುತ್ತವೆ.

ಕಿರಿಯರಲ್ಲಿನ ವೀರತೆಯನ್ನು ಈ ಲಾವಣಿ ಸುಂದರವಾಗಿ ಬಿಂಬಿಸುತ್ತದೆ. ದಳವಾಯಿ ತಿಮ್ಮಣ್ಣ, ಶಿವನೆ ನಿಂಗಣ್ಣ, ಮುಗುಳಿ ತಿಮ್ಮಣ್ಣ ಇವರು ಇಂಥ ವೀರಪ್ರದರ್ಶನಕ್ಕೆ ಸಾಕ್ಷಿಯಾಗಿದ್ದಾರೆ. ಒಂದು ಕಾಲದ ನಿಜಸಂಗತಿ ಜಾನಪದೀಯತೆಯನ್ನು ಪಡೆದಿರುವು ದನ್ನು ಗಮನಿಸಿದರೆ, ಲಾವಣಿಯನ್ನು ಕಟ್ಟಿರುವ ವ್ಯಕ್ತಿಯ ಸಾಂಸ್ಕೃತಿಕ ಕ್ರಿಯಾಶೀಲತೆ ಎದ್ದು ಕಾಣುತ್ತದೆ. ಮುಖ್ಯವಾಗಿ ಇದೊಂದು ಸಮೂಹಸೃಷ್ಟಿ ರಚನೆ. ಇಲ್ಲಿ ಯಾರೊ ಒಬ್ಬ ವೀರನ ಕಥೆಯಷ್ಟೆ ಬರದೆ ಹಲವು ವೀರರ ಕಥೆಗಳು ಬರುತ್ತವೆ. ಈ ಹಿನ್ನೆಲೆ ಯಿಂದಲೂ ಲಾವಣಿಗೆ ಹೆಚ್ಚಿನ ಸ್ಥಾನಮಾನವಿದೆ. ಜನಾಂಗೀಯ ಸಮಸ್ಯೆಯು ಒಂದು ಸಾರ್ವತ್ರಿಕ ಸತ್ಯವಾಗಿ ಮಾರ್ಪಾಡಬಲ್ಲ ರೀತಿಯ ಇಲ್ಲಿನ ರಚನಾತಂತ್ರ ಬದುಕಿನ ಗಂಭೀರ ಕಾಳಜಿಗಳನ್ನು ಹೊಟ್ಟೆ ಸೃಷ್ಟಿಯಾದುದೆಂಬುದು ಸ್ಪಷ್ಟವಾಗುತ್ತದೆ. ಹೀಗೆ ಹಲವು ಸಾಂಸ್ಕೃತಿಕ ವಿಚಾರಗಳನ್ನು ತನ್ನುದರದಲ್ಲಿಟ್ಟುಕೊಂಡಿರುವ ಈ ಕೃತಿ ಕನ್ನಡ ಜನಪದ ಲಾವಣಿಗಳ ಸಾಲಿನಲ್ಲಿ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಬಲ್ಲದೆಂದು ನಂಬಬಹುದಾಗಿದೆ.

ಅಲ್ಲಲ್ಲಿ ಅಲ್ಪ ಸ್ವಲ್ಪ ಕೇಳಿದ ಈ ಕಥೆ ಆಗಾಗ್ಗೆ ಹಲವು ಕಾರಣಗಳಿಂದಾಗಿ ನೆನಪಾಗು ತಿತ್ತು. ಒಂದು ರೀತಿಯಲ್ಲಿ ನನ್ನ ಸೃಜನತೆಯನ್ನು ಎಚ್ಚರಗೊಳಿಸುವ ಕೆಲಸವನ್ನೂ ಇದು ಮಾಡಿದೆ. ನಾನು ೧೯೮೫ರಲ್ಲಿ ಜಾನಪದದಲ್ಲಿ ಸ್ನಾತಕೋತ್ತರ ಡಿಪ್ಲೊಮ ಅಧ್ಯಯನ ಮಾಡುವಾಗ ಇದರ ಸಂಪೂರ್ಣ ಸಂಪಾದನೆಗೆ ಕ್ಷೇತ್ರಕಾರ್ಯವನ್ನು ಕೈಗೊಂಡೆ. ಇದು ನನಗೆ ಜನರ ಸಂಸ್ಕೃತಿಯ ಕ್ರಿಯಾಶೀಲತೆಯ ಹಲವು ಪಾಠಗಳನ್ನು ಕಲಿಸಿಕೊಟ್ಟಿತು. ಈ ಕಾರ್ಯ ಜನರ ಬದುಕನ್ನು ಹತ್ತಿರದಿಂದ ತೋರಿಸಿದ್ದಷ್ಟೇ ಅಲ್ಲದೆ ಸಾಂಸ್ಕೃತಿಕ

ವಿಚಾರಗಳ ಬಗ್ಗೆ ಹೊಸ ಹೊಸ ಸಾಧ್ಯತೆಗಳನ್ನು ತೋರಿಸಿಕೊಟ್ಟಿತು.

ನನ್ನಿಂದ ಇಂತಹದೊಂದು ಕಾರ್ಯವನ್ನು ಮಾಡಿಸಿದ ಡಾ. ಜೀ.ಶಂ. ಪರಮಶಿವಯ್ಯ ಸುಧಾಕರ, ರಾಗೌ, ಡಿ.ಕೆ. ರಾಜೇಂದ್ರ, ಅಂಬಳಿಕೆ ಹಿರಿಯಣ್ಣ, ಹಿ. ಶಿ. ರಾಮಚಂದ್ರೆ ಗೌಡ ಮತ್ತು ಗೆಳೆಯರೂ ಜಾನಪದ ವಿದ್ವಾಂಸರೂ ಆದ ರಂಗಾರೆಡ್ಡಿ ಕೋಡಿರಾಂಪುರ ಅವರಿಗೂ ಈ ಕಾವ್ಯ ಸಂಗ್ರಹಕಾರ್ಯದ ಸಂದರ್ಭದಲ್ಲಿ ನನ್ನೊಂದಿಗಿದ್ದು ನನ್ನ ಕಿರುಕುಳಗಳನ್ನು ಸಹಿಸಿ ಸಹಕರಿಸಿದ ಮಿತ್ರ ಎಲ್. ನಾಗರಾಜು ಮತ್ತು ಮಾವನವ ರಾದ ತಾಳೀಕಟ್ಟೆ, ಪುಟ್ಟಪ್ಪ ಮಾಸ್ಟರಿಗೂ, ತಮ್ಮ ದೈನಂದಿನ ಕೂಲಿನಾಲಿಯ ಹೊತ್ತಿ ನಲ್ಲ ತಾವು ಕಲಿತಿದ್ದ ಈ ಕಾಳಗದ ಪದವನ್ನು ಯಾವುದೇ ಚೌಕಾಸಿಯಿಲ್ಲದೆ ಹಾಡಿ ಪುಸ್ತಕದ ಈ ರೂಪಕ್ಕೆ ಅನುಕೂಲ ಮಾಡಿಕೊಟ್ಟ ತಾಳಿಕಟ್ಟೆ ಕುಲವ್ವ, ರಾಮಕ್ಕ, ಸತ್ಯವ್ವ ಮತ್ತು ಸಿದ್ದವ್ವ ಅವರುಗಳಿಗೂ ಈ ಕೃತಿಯನ್ನು ಪ್ರಕಟಿಸುವ ಜವಾಬ್ದಾರಿ ಯನ್ನು ಸಂತೋಷದಿಂದ ಹೊತ್ತ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಜೀ. ಶಂ. ಪರಮಶಿವಯ್ಯ ಮತ್ತು ಅದರ ಸದಸ್ಯರು ಗಳಿಗೂ ಅಚ್ಚುಕಟ್ಟಾಗಿ ಮುದ್ರಿಸಿದ ವಾಣೀ ಪ್ರೆಸ್, ಚಾಮರಾಜಪುರಂ, ಮೈಸೂರು ಇವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

೦೯-೦೨-೧೯೯೪ ರಾಜಪ್ಪ ದಳವಾಯಿ

ಕನ್ನಡ ಅಧ್ಯಾಪಕ

ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು

# ಏಳೂರು ದೇವರ ಕಾಳಗ

---

ಸೊಲ್ಲು ಸೊಲ್ಲಿಗೆ ಬಳ ನೆನದೇನು

ಎಳ್ಳು ಜೀರಿಗೆ ಬೆಳೆವೋಳ-ಭೂಮಿತಾಯಿ

ಬಲ್ಲೋಳ ಮೊದುಲೆ ನೆನದೇನು

ಮಾತು ಮಾತಿಗೆ ಕಾತೀಯ ನೆನದೇನ

ಕಾತ ಜೀರಿಗೆ ಬೆಳೆವೋಳ-ಭೂಮಿತಾಯಿ (CG to

ಮಾತು ಮಾತಿಗೆ ನೆನದೇನ

ದುಡ್ಡಿನ ದೂಪಾನಕಿ ದೊಡೋನ ನೆನದೇನ

ದೊಡ್ಡರ ಗ್ರಾಮಾದ ಒಡಿಯ-ಹಿರಿಯಯ್ಯನ

ದೊಡ್ಡನ ಮೊದು ನೆನದೇನು

ಮೊದುಲೆ ಸೊಲ್ಲಿಗೆ ಮನಿಸ್ವಾಮಿ ನೆನದೇನ

ಮನಿಮಕ್ಕಳೆಲ್ಲೋ ಸಲವೋನೆ-ಹಿರಿಯಯ್ಯನ

ಮೊದುಲೆ ಸೊಲ್ಲಿಗೆ ನೆನದೇನ

ಕಣಗಾಲ ಹೂವು ಕೈತುಂಬ ನಾ ಕೊಡುವೆ

ಕಣಿವೆ ಈರಣಗೆ ನಮಸೂವೆ-ನಮದಣಿ

ಕಲಿಯಾಗಿ ಬರುಲೆ ಸಬಿಯಾಗೆ

ಮಗ್ಗಾಲ ಹೂವು ಮಗ್ಗು ಮಗ್ಗು ನಾ ಕೊಡುವೆ

ಹಿಗ್ಗಣೇಶ್ವರಗೆ ನಮಸೂವೆ-ನಮದಣಿ

ಕುಗ್ಗು ದಲೆ ಬರಲೆ ಸಬಿಯಾಗೆ

ಬಲಬಂಡೆ ಯೆಂಗಿ ಬಲಬಂಡೆ ಬಿಂಗಿಯೋ

ಬಲಬಂಡೆ ಹೊನ್ನು ಹಲಗೇಯ-ಹಿರಿಯಯ್ಯನ

ಬಲಬಂಡಿ ಪದವ ನಡಸೂವೆ

ಬಾರದ ಪದವ ಹೇಳಿ ನೀ ಬರಕೊಡೋ

ಹೇಳಿ ಬರಕೊಡೋ ಹಿರಿಯಯ್ಯ ನಾ ನಿನಗೆ

ನಲವಕ್ಕೆ ಸಾರಿ ಶರಣಾರ್ಥಿ

ತಪ್ಪಿದ ಪದ ನನಗೆ ತಿದ್ದಿ ನೀ ಬರಕೊಡೋ

ತಿದ್ದಿ ಬರಕೊಡೋ ಹಿರಿಯಯ್ಯ ನಾ ನಿನಗೆ

ಯಂಬತ್ತು ಸಾರಿ ಶರಣಾರ್ಥಿ

ತಪ್ಪಿದ ಪದ ನನಗೆ ತಿದ್ದಿ ನೀ ಕೊಡಪ್ಪ

ತಿದ್ದಿ ಬರಕೊಡೋ ಹಿರಿಯಯ್ಯೋ ನಾ ನಿನಗೆ

ತೊಂಬತ್ತೆ ಸಾರಿ ಶರಣಾರ್ಥಿ

ಕಾಳುಗದ ಕತಿಯೋ ಗ್ಯಾನವುಳ್ಳರೆ ಕೇಳಿ

ಗ್ಯಾನವುಳ್ಳೋರೆ ಹಿರಿಯೋರೆ-ಕೇಳಿದುರೆ

ನಾಳಿ ನಿಮ್ಮ ಚಿಂತೆ ಪರಿಹಾರೊ

ಗದ್ದಿಗಿ ಹಾಡೋ ಮತಿಯ ಬಲ್ಲೋರೆ ಕೇಳಿ

ಮತಿಯ ಬರೆ ಹಿರಿಯೋ ಕೇಳಿದುರೆ

ಮತ್ತು ನಿಮ್ಮ ಚಿಂತೆ ಪರಿಹಾರೋ

ಕಾಳುಗದ ಕತಿಯೋ ಘನವಾಗಿ ಕೇಳೀರಿ

ಗ್ಯಾನಬಿಟ್ಟು ಪರಗ್ಯಾನದಿಂದ ಕೇಳಿದೋರಿಗೆ-ತಾಳಿಕಟ್ಟೆ

ಹಿರಿಯಯ್ಯ ಕ್ಯಾಲು ಗುಳ ಹಿಡಿದೆದ್ದ

ಗದ್ದೀಗಿ ಹಾಡೋ ಮತಿಯ ಬಲ್ಲೋರೆ ಕೇಳ್ರಿ

ಮತಿಬಿಟ್ಟು ಪರಮತಿಯಿಂದ ಕೇಳಿದೋರಿಗೆ ತಾಳೀಕಟ್ಟೆ

ಮಾರಯ್ಯ ಕಾಲು ಗುಳ ಹಿಡಿದೆದ್ದ

ಹಂಚೀಯ ಹುಲ್ಲಾಗೆ ಹೊಂಚಾಡಯ್ಯಾರವೊ ತಾನಂದನ್ನಾನ

ಗೊಂಚಾಲ ಕಿವಿಯ ದಳವಾಯಿ-ತಿಮ್ಮಣ್ಣ

ಹೊಂಚಾಡಿ ಹುಲಿಯ ಹೊಡುದಾನೆ

ಏಳೂರು ದೇವರ ಕಾಳಗ

ಆಪಿನುಲ್ಲಾಗೆ ಆತಾಡಯ್ಯಾರವ್ವ
ಚೌಕೂಳಿ ಕಿವಿಯ ದಳವಾಯಿ-ತಿಮ್ಮಣ್ಣನಿಂಗ್ ಬೇಕ
ಆತಾಡಿ ಹುಲಿಯ ಹೊಡುದಾನೆ

ಬಾಗೆ ಹುಲ್ಲಾಗೆ ಬಾಗ್ಯಾಡಯ್ಯಾರವ್ವ
ಬಾಬಾಲಿ ಕಿವಿಯ ದಳವಾಯಿ-ತಿಮ್ಮಣ್ಣ
ಬಾಗ್ಯಾಡಿ ಹುಲಿಯ ಹೊಡುದಾನೆ

ಹೆಬ್ಬಾಗಲಾಗೆ ಅಬ್ಬರಸಯ್ಯಾರವ್ವ
ಒಬ್ಬ ತಾಯಿಗೊಬ್ಬ ಮಗನಂತೆ-ತಿಮ್ಮಣ್ಣ
ಅಬ್ಬುರಿಸಿ ಹೊಡೆದ ಹುಲಿಗಾಳ

ಗಿಡ್ಡರಸು ತಿಮ್ಮಣ್ಣೋ ಗಿಡಗನ ಬ್ಯಾಟೇ ವ್ಯಾದ
ಮದನಾರಿ ಸೂಳೆ ಮರನೇರಿ-ಕೇಳ್ಯಾಳಲ್ಲೇ
ಗಿಡ್ಡರಸು ಯಾರಾ ಮಗನಯ್ಯ

ಗಿಡ್ಡರಸು ಯಾರ ಮಗನಯ್ಯ ತಾಳೀಕಟ್ಟೆ - ೧೯
ರಾಯ ಬ್ಯಾಲನೂರ ಮಗನಂದ

ಆಲದರಿವೆ ಹೊದ್ದು ಇವಬಂದ ದಳವಾಯಿ
ಇವಂಕೇಳೆರವರು ಕೊಲಗಾಳ-ತಾಳೀಕಟ್ಟೆ
ಸೆಟ್ಟಿ ಬ್ಯಾಲನೂರ ಮಗನಂತೆ

ತುಪ್ಪದರಿವೆ ಹೊದ್ದು ರಟ್ಟೆ ತಿರುವತ ಬಂದ
ಮತ್ತು ಕೇಳೇರವರು ಕೊಲಗಳ-ತಾಳೀಕಟ್ಟೆ
ಸೆಟ್ಟ ಬ್ಯಾಲನೂರ ಮಗನಂತೆ

ಹತ್ತಾಳಿನೊಳಗೆ ಸಕ್ಕೂರ ಮೂಡಿದಂಗೆ
ತುಂಬಿಟ್ಟಯ್ಯಾರೆ ಪದುಕಾವ-ಬ್ಯಾಲನೂರ
ಆಳಿನಾಗುಳ ತಿಮ್ಮಣ್ಣ ಚೆಲುವಾನೆ

ಹತ್ತಾಳಿನೊಳಗೆ ತೋರಿಟ್ಟಯ್ಯಾರವ್ವ
ತೋರಿಟ್ಟ ಬ್ಯಾರೆ ಪದುಕಾವ-ಬ್ಯಾಲನೂರ
ಮಂದ್ಯಗುಳ ತಿಮ್ಮಣ್ಣ ಚೆಲುವಾನೆ

ಏಳೂರು ದೇವರ ಕಾಳಗ

ಕರಿಯ ಕಂಬಳಿ ಹೊದ್ದು ದುರುಗಾದ ಕೋಲಿಡುದು
ಕುರಿಯ ಹಿಂಡಿನಾಗೆ ಬರುವೊ ದಳವಾಯ ತಿಮ್ಮಣ್ಣುಗೆ
ಎಂಥೋರೆ ಕಯ್ಯ ಮುಗುದಾರೆ

ಮಬ್ಬುಗಂಬಳಿ ಹೊದ್ದು ಬಾರಿ ಕೋಲಾ ಹಿಡುದು
ಮುಂದಾಲಿಂಡಿನಾಗೆ ಬರುವೋ-ತಿಮ್ಮಣ್ಣಾಗೆ
ದೊಡ್ಡೋರೆ ಕಯ್ಯ ಮುಗುದಾರೆ

ಸ್ವಾಮಿ ತಿಮ್ಮಣ್ಣನ ಪಾವುದು ಪವಾಡು

ಆಳಾಗುಳ ಜಿಲ್ಲೆ ಮರಿಜಲ್ಲೆ-ಬಂಕನಕಟ್ಟೆ

ಹಾದ್ಯಾಗ ತಾನೇ ಮಡುದಾನೆ

ಅಪ್ಪಾ ತಿಮ್ಮಣುನೋ ಪಟ್ಟೆ ಪಲ್ಲೇವಾಡು

ತುಪ್ಪಾಗುಳ ಜಲ್ಲೆ ಮರಿಜಲ್ಲೆ-ಬಂಕನಕಟ್ಟೆ

ಹಟ್ಯಾಗೆ ತಾನೇ ಮಡುದಾನೆ

ಹಟ್ಯಾಗೆ ತಾನೇ ಮರುದಾನ್ ಬ್ಯಾಲನೂರ

ವ್ವಾದ ವಕ್ಕಾಲ ಕರಿಯಾಕೆ-ತಿಮ್ಮಣ್ಣ

ತಂದೆ ಹಿರಿಯಯ್ಯನ ಕೇಳುತ್ತಾನೆ

ತಂದೆ ಹಿರಿಯಯ್ಯೋ ಕೇಳ್ಯಾನೆ ದಳವಾಯಿ

ತಂದೆ ವಕ್ಕಾಲ ಕರುತಾರೋ

ಸಣ್ಣೋನು ದಳವಾಯಿ ಮತ್ತೆಲ್ಲಿ ಹೊರಟಾನು

ಅವರಪ್ಪನೊಕ್ಕಾಲ ಹುಡುಕೂತ-ದಳವಾಯಿ

ಶಂಕು ಬವನಾಸಿ ಹೆಗಲೇರಿ

ಶಂಕು ಬವನಾಸಿ ಹೆಗಲೇರಿ ದಳವಾಯಿ

ಆನವೇರಿ ದಾರಿ ಹಿಡುದಾನೆ

ಕರಿಗಲ್ಲು ಹಿಟ್ಟಾದು ಕಗ್ಗಲ್ಲು ಪುಡಿಯಾದು

ಸರಿಯಾದ ಮರವೇ ಬಯಲಾದು ತಿಮ್ಮಣ್ಣ

ವ್ಯಾದ ವಕ್ಕಾಲ ಹುಡುಕೂತ

ಏಳೂರು ದೇವರ ಕಾಳಗ

ವಾದ ವಕ್ಕಾಲ ಹುಡುಕೂತ ದಳವಾಯಿ

ತಿಮ್ಮಣ್ಣ ಬರುವೋ ರಭಸಾಕೆ-ಆಗಿನ್ನು

ಬಂದಾನಾನ್ವೇರಿ ಎಡಬಲಕೆ

ಮಬ್ಬು ಗಂಬಳಿ ಹೊದ್ದು ದುಂಡು ನಾಮಾನಿಟ್ಟು

ಬಾರಿಯ ದೊಣ್ಣೆ ಬಲಗೈಲಿ ತಿಮ್ಮಣ್ಣ

ಹೊಕ್ಕಾನಾನ್ವೇರಿ ಒಳವೀಗೆ

ಕ್ಕಾನಾನ್ವೇರಿ ಒಳವಿಗೆ ತಿಮ್ಮಣ್ಣ

ಅವರಪ್ಪಾನೊಕ್ಕಾಲ ಹುಡುಕೂತ

ಕರಿಯ ಕಂಬಳಿ ಹೊದ್ದು ನೀಳ ನಾಮಾನಿಟ್ಟು

ಬಲವೀನ ದೊಣ್ಣೆ ಬಲಗೈಲಿ-ತಿಮ್ಮಣ್ಣ

ವಾದಾನಾನ್ವೇರಿ ಒಳವಿಗೆ

ವಾದಾನಾನ್ಯರಿ ಒಳವಿಗೆ ದಳವಾಯಿ

ವಾದಾವಕ್ಕಾಲ ಹುಡುಕೂತ-ತಿಮ್ಮಣ್ಣ

ಪಟ್ಟಾಣನೆಲ್ಲಾ ಹುಡುಕ್ಯಾನೆ

ಆನವೇರಿ ಪಟ್ಟಾಣ ಹುಡುಕ್ಯಾನೆ ದಳವಾಯಿ

ಅವನಪ್ಪಾನೊಕ್ಕಾಲೆ ಸಿಗಲಿಲ್ಲೊ-ದಳವಾಯಿ

ಅಲ್ಲೊಂದು ರಾತ್ರಿ ಉಳುದಾನೆ

ಬೆಳ್ಳನ್ನ ಬೆಳಕರುದು ಬೆಳ್ಳಿ ದೇವರು ಮೂಡಿ
ಬೆಳಗಿನ ಪಾರೆ ಬರುತಾನೆ

ಕೇರಿ ಕೇರಿಗುಂಟೆ ದಳವಾಯಿ ತಿಮ್ಮಣ್ಣ
ವಕ್ಕಾಲುಡು ಕೂತ ಬರುತಾನೆ

ಗುದ್ದಿ ನಿಂಗಣುನೋ ಹಿರಿಸ್ವಾಸೆ ತಾಯವ್ವ
ರಾಗಿಕಲ್ಲಿಗೆ ರಾಗಾವ ಪಾಡ್ಯಾಳೆ
ಹಿರಿಯಯ್ಯನ ಪದವೋ ಹೇಳುತ್ತಾಳೆ

ಗಂಡನ ಮನಿಯಾ ಸ್ವಾಮಿ ಗಂಡು ಮಕ್ಕಳ
ಚೆಂಡುಗನ್ನ ಚೆಲುವಾರ-ಕೊಟ್ಟಾರೆ
ಇಲ್ಲಿಂದ ಕಯ್ಯ ಮುಗುದೇನು

ಇಲ್ಲಿಂದ ಕಯ್ಯ ಮುಗುದೇನು ಬೀರೇಶ
ಮಂಡಕ್ಕಿ ತೇರ ಹರಸೂವೆ-ಹಿರಿಯಯ್ಯ
ಬಂಜೆಂಬ ಸೊಲ್ಲ ಬಿಡಿಸಯ್ಯೋ

ಹಿರಿಯಯ್ಯಂಬೊ ಸೊಲ್ಲ ತಿಮ್ಮಣ್ಣ ಕೇಳ್ಯಾನೆ
ಬಚ್ಯಾಲ ಕಂಡೀಗೆ ಬರುತ್ತಾನೆ-ತಿಮ್ಮಣ್ಣ
ತಂದೆಯ ಪದವಾ ಕೇಳುತ್ತಾನೆ

ಹಿರಿಯ ಎಂಬ ಸೊಲ್ಲ ಕೇಳ್ಯಾನೆ ತಿಮ್ಮಣ್ಣ

ನೋಡುತ್ತಾನೆ ಅವರೊ ಮನಿಮಾರು-ತಿಮ್ಮಣ್ಣ

ಗುದ್ದಿ ನಿಂಗಣನಾ ಅರಮನೆ

ಗುದ್ದಿ ನಿಂಗಣುನ ಅರಮಾನೆ ನೋಡಿಕ್ಯಂಡು

ತಂದೆ ವಕ್ಕಾಲು ಸಿಗತಂದ-ಬೀರೇಶ

ಅಲ್ಲೊಂದು ರಾತ್ರಿ ಉಳುದಾನೆ

ಸಕ್ಕೂರ ಮೂಡಿ ಆರು ತಾಸಾದಾವು

ದಳವಾಯ್ ತಿಮ್ಮಣ್ಣ ಬರುತ್ತಾನೆ

ಶಂಕೂನೆ ಬವನಾಸಿ ಜಾಗಟೆ ಹೆಗಲೇರಿ

ಗುದ್ದಿ ನಿಂಗಣನೊ ಅರಮಾನೆ-ಬಾಗುಲ ಮುಂದೆ

ಬೋಲ್ಯಾಡಿ ಸಂಕು ಹಿಡುದಾನೆ

ಬೋರ್ಯಾಡಿ ಸಂಕು ಹಿಡುದಾನೆ ದಳವಾಯ ತಿಮ್ಮಣ್ಣ

ಸಂಕಿಡುದೆ ಜಾಗಟೆ ಬಡುದಾನೆ

ಗುದ್ದಿ ನಿಂಗಣ್ಣ ಹಿರಿಸ್ವಾಸೆ ಕರುದಾನೆ

ದಾಸಯ್ಯಗೆ ಪಡಿಯಾ ನೀಡುಬಾರೆ

ಮುತ್ತಿನ ಮರುದಾಗೆ ಪಡಿಗಾಳ ತಕ್ಕೊಂಡು

ದಾಸಯ್ಯಗೆ ಪಡಿಯಾ ನೀಡುತ್ತಾಳೆ

ಮುಂದಾಲ ಬಾಗುಲಿಗೆ ನೀಡಾಕೆ ಬಂದಾರೆ

ದಾಸಯನ ಸುಳವೇ ಇಲ್ಲವಂತೆ-ಅವನೀಗ

ಹಿಂದಿಲ ಬಾಗಲಾಗೆ ಬರುತಾನೆ

ಏಳರು ದೇವರ ಕಾಳಗ

ಹಿಂದಲ ಬಾಗುಲಾಗೆ ದಳವಾಯ ತಿಮ್ಮಣ್ಣ

ಬೋರ್ಯಾಡಿ ಸಂಕು ಹಿಡುದಾನೆ

ಆವ ಬಾಗುಲಾಗಿಲ್ಲೋ ಮುಂದಲ ಬಾಗುಲಾಗಿಲ್ಲೋ

ದಳವಾಯ್ ತಿಮ್ಮಣ್ಣನ ಸುಳಿವಿಲ್ಲೋ

ದಾಸಯ್ಯನ ಸುಳುವು ಇಲವಂತೆ ಆಗಿನ್ನು

ಗುದ್ದಿ ನಿಂಗಣಗೆ ಹೇಳುತ್ತಾಳೆ

ಗುದ್ದಿ ನಿಂಗಣುನ ಹಿರೆಸ್ವಾಸೆ ತಾಯವ್ವ

ಕುರಿಗೀಗ ಬುತ್ತಿ ಒಯುತ್ತಾಳೆ-ತಿಮ್ಮಣ್ಣ

ಹಿಂಬಾಲ ಹಿಡುದೇ ಹೋಗುತಾನೆ

ಹಿಂಬಾಲ ಹಿಡುದೇ ವಾದಾನೆ ತಿಮ್ಮಣ್ಣ

ಕುರಿಯ ಹಿಂಡಿನಾಗೆ ಬರುತಾನೆ

ಮಬ್ಬು ಗಂಬಳಿ ಹೊದ್ದು ತುಂಡು ನಾಮಾನಿಟ್ಟು
ಹಿಂಬು ನೋಡುತ್ತಾನೆ ಹಗಲೆಲ್ಲಾ

ಕರಿಯ ಕಂಬಳಿ ಹೊದ್ದು ದುರುಗಾದ ಕೋಲಿಡುದು
ತಾವು ನೋಡುತ್ತಾನೆ ಹಗಲೆಲ್ಲಾ ದಳವಾಯಿ
ಕುರಿಯ ಹಿಂಡಿನಾಗೆ ಬರುತಾನೆ

ಅಂಡಾರು ಸಾವೂರೊ ಗುಂಡಾರು ಸಾವೂರೊ
ಗುಂಡುದಗರಿನ ಶಿರವೋ ಹರುದಾನೆ ದಳವಾಯಿ
ಕಳ್ಳು ಪಚ್ಚಿಗುಳ ಸುರಿಸ್ಯಾನೆ

ಕಳ್ಳು ಪಚ್ಚಿಗುಳ ಸುರಿಸ್ಯಾನ ದಳವಾಯಿ
ಜಂಗಮರ ಕೇರಿಗೆ ಎಸುದಾನೆ

ಅಂಡಾರು ಸಾವೂರೊ ಗುಂಡಾರು ಸಾವೂರೊ
ಗುಂಡುದಗರಿನ ಶಿರವೋ ಹರುದಾನೆ-ತಿಮ್ಮಣ್ಣ
ಲಿಂಗವಂತರ ಕೇರೀಗೆ ಎಸುದಾನೆ

ಹತ್ತೂ ಸಾವೂರಿಂಡೊ ಐದು ಸಾವುರ ಮಾಡಿ
ಕುರಿಯ ಹಿಂಡುನೆಲ್ಲಾ ಕಳುದಾನೆ

ಆರು ಸಾವೂರಿಂಡೋ ಮೂರು ಸಾವೂರ ಮಾಡಿ
ಮರಿಯ ಹಿಂಡುದೆಲ್ಲಾ ಹಳುದಾನೆ

ಗುದ್ದಿ ನಿಂಗಣುನ ಕುರಿಗಾಳ ಹಳುದಾನೆ
ಎಮ್ಮೆ ಕಾಲಾಗೆ ಬರುತ್ತಾನೆ

ಸ್ವಾಮಿ ಮುಣುಗ್ಯಾನೆ ಮುಳುಚಂಚೆ ಆದಾವು
ದನವೀನ ಕಾಲಾಗೆ ಒಳಹೊಕ್ಕ

ಎಮ್ಮೆಯ ಕೆಚ್ಚಲಾಗೆ ಹಿಪ್ಪೆಯ ನೊಣವಾಗಿ
ಹಿಂದಲಕ್ಕಿಗೆ ವ್ಯಾದಾನೆ-ದಳವಾಯಿ
ಹಿಂದಲಕ್ಕಾಗೆ ನೆಲಿಗೊಂಡ

ಚಂಜಿ ಕಸವಹೊಡಿಯೇ ನಂದದೀವಿಗೆ
ಹೊಚ್ಚೆ ಹಿರಿಯಯ್ಯನ ಅರಮನಿಗೆ

ಪಚ್ಚೆಯ ಹಣತಿಗೆ ಪದುಮದ ಬತ್ತಿ ಹಾಕಿ
ಹೊಚ್ಚೇ ಬೀರೇಶನ ಅರಮನಿಗೆ-ಅಂದೇಳಿ
ಗುದ್ದಿ ನಿಂಗಣ್ಣೋ ಹೇಳುತ್ತಾನೆ.

ಹಿರಿಯಾನೆ ಮಗನಿಗೆ ಏನೆಂದು ಹೇಳ್ತಾನೆ
ಕರುಬಿಟ್ಟು ಹಾಲ ಕರಿ ಮಗುನೆ-ಅಂದೇಳಿ
ತಂದೆ ನಿಂಗಣ್ಣ ಹೇಳುತ್ತಾನೆ

ತಂದೆ ಹೇಳಿದ ಮಾತು ಕೇಳ್ಯಾನೆ ಹಿರಿಯಾ ಮಗ

ಕರುಬಿಟ್ಟು ಹಾಲೂ ಕರುದಾನೆ-ಆಗಿನ್ನು

ಏಳೆಮ್ಮೆ ರೈತ ಕರುದಾವೆ

ಏಳೆಮ್ಮೆ ರೈತ ಕರುದಾವೆ ತಂಬಿಗೆ

ತಂದೆ ಮಂಚಾಕೆ ಇಡುತಾನೆ

ತಂದೆ ಮಂಚಾಕೆ ಇಟ್ಟಾನೆ ನಿಂಗಣ್ಣ

ತಂಬಿಗೆ ನೋಡಿ ತಲೆದೂಗಿ-ನಿಂಗಣ್ಣ

ಏನೆಂದು ಆಗ ಹೇಳುತ್ತಾನೆ

ಗಾಡಿಕಾರ ದಾಸ ಬಂದಿದ್ದ ನೀವೀಗ

ದಾಸನೆಲ್ಲಿದ್ದ ಹುಡಕೀರಿ

ಏಳೂರು ದೇವರ ಕಾಳಗ

ಮೂಡಲ ಸೀಮ್ಯಾನು ಗಾಡಿಕಾರ ದಾಸಾ ಬಂದು

ಕೇಡು ತಂದು ಎಳುದ ನನಮನಿಗೆ-ನೀವೀಗ

ದಾಸನೆಲ್ಲಿದ್ದ ಹುಡುಕೀರಿ

ಅಲ್ಲೀನೆ ಹುಡುಕ್ಯಾರು ಇಲ್ಲೀನೆ ಹುಡುಕ್ಯಾರು

ಪಟ್ಟಾಣನೆಲ್ಲೋ ಹುಡುಕ್ಯಾರೆ ಅವರಿಗೆ

ದಾಸಯ್ಯನ ಸುಳವೇ ಸಿಗಲಿಲ್ಲ.

ದಾಸಯ್ಯನ ಸುಳವೇ ಸಿಗಲಿಲ್ಲ ತಿಮ್ಮಣ್ಣ

ಹಿಂದಲಕ್ಕಾಗೆ ಇರುತಾನೆ

ಉಂಡುಟ್ಟು ಅವರೆಲ್ಲ ಸಡುಗರ ಸಂಪತ್ತು

ಸಡಗರದ ನಿದ್ದೆ ಮಾಡುತ್ತಾರೆ

ಗುದ್ದಿ ನಿಂಗಣ್ಣ ಸಾಲಿ ಮಂಚದ ಮ್ಯಾಲೆ

ಸಾಲಿ ಮಂಚದಲೇ ಮಲಗ್ಯಾನೆ

ನಾಕು ಮೂಲೇಗೂ ನಾಕು ನಂದಾದೀವಿಗೆ ಬೆಳಕು

ಗುದ್ದಿ ನಿಂಗಣುಗೇ ಸುಕ ನಿದ್ರೆ ಮಾಡುವಾಗ

ಹಿಂದಲಕ್ಕಿಂದ ಬರುತಾನೆ

ಹಿಂದಲಕ್ಕಿಂದ ಬಂದಾನೆ ದಳವಾಯಿ

ಗುದ್ದಿ ನಿಂಗಣುನೊ ಸಿರಗಾಳು-ಕೊಯ್ದುಕೊಂಡು

ಕಕ್ಕೂಸ್ತ ವಳಗೇ ಇಟಗಂಡ

ಕಕ್ಕೂಸ್ತ ವಳಗೇ ತಲಿಗಾಳ ಇಟಗಂಡು

ಕೂಗಾಕಿ ಕ್ವಾಟೆ ಹತ್ತು ತಾನೆ

ಕ್ವಾಟ್ಯ ಮ್ಯಾಲೆ ಕುತುಕೊಂಡು ದಳವಾಯಿ

ಏನಂದೇ ಆಗ ನುಡುದಾನೆ

ಕಳ್ಳಾನಂದೀರಿ ನನ್ನ ಸುಳ್ಳಾನಂದೀರಿ ನನ್ನ ತಾನಂದನ್ನಾನ

ಹಿರಿಯಯ್ಯನ ಮಾನೆ ಬೆಸುಮಾಗ-ನಾನೀಗ

ನಮ್ಮಪ್ಪನ ತಲಿಯ ಒಯ್ತಿನಿ

ಕಾಣೆ ಅಂದಿರಿ ನೀವು ಕಂಡೆ ಅದಿಂರಿ ನೀವು

ಕೆಂಚಯ್ಯನ ಮಾನಿ ಬೆಸುಮಾಗ-ನಾನೀಗ

ಆಗದೋರ ತಲೆಯ ಒಯ್ದಿನಿ

ಆಗದೋರ ತಲಿಯ ಒಯ್ತಿನಿ ಅಂತೇಳಿ

ಕೂಗಾಕಿ ಕ್ವಾಟೆ ದುಮುಕ್ಯಾನ

ಕೂಗಾಕಿದ ಸಬುದ ಆನವೇರಿ ಸಿದ್ದ ಕೇಳಿ

ಪಟ್ಟಣದ ಜನರೇ ಹೇಳುತ್ತಾರೆ

ಹಕ್ಕಿ ಹಾರದು ಕ್ವಾಟೆ ಬೆಕ್ಕು ನುಶಿಯದ ಬೇಲಿ

ರಕ್ಕುಸನ ಕ್ವಾಟೆ ರಣಗ್ವಾಟೆ-ಹೊರಬಂದು

ಹೀಗೋಯ್ದ ಕ್ಯಾರೆ ಅವ್ರ ತಲಿಗಾಳ

ಹದ್ದು ಹಾರದ ಕ್ವಾಟೆ ಇರುವೆ ನುಶಿಯದ ಬೇಲಿ

ರಾವಣನ ಕ್ವಾಟೆ ರಣಗ್ವಾಟೆ-ಹೊರಬಂದು

ಮತ್ತೊಯ್ದ ಕ್ಯಾರೆ ತಲಿಗಾಳ

ಮತ್ತೊಯ್ದು ಬ್ಯಾರೆ ತಲಿಗಾಳ ಅಂತೇಳಿ hchu, ಹೀಗೆ

ಪಟ್ಟಣದ ಜನರೇ ನುಡುದಾರೆ

ಆನವೇರಿ ಸಿದ್ದಯ್ಯೋ ಮುನ್ನೂರಾನೆ ಕುದ್ರೆ 'ದಿ ಕೇಳಿದ

ಮುನ್ನೂರು ಜನ ರಾವುತೂರು-ಆಗಿನ್ನು

ಆಳುಮಾಡಿ ಸಿದ್ದಯ್ಯ ಕಳುವಾನೆ

ಕಾಳ್ಯಾನ ಹಿಡಿತನ್ನಿ ಕಾನ ಹೊಡೆತನ್ನಿ

ಕಾಳ್ಯಾನ ನೀವು ಹಿಡತನ್ನಿ

ಮುನ್ನೂರಾನೆ ಕುದ್ರೆ ಮುನ್ನೂರು ಜನ ರಾವುತ್ತೂರು

ದಳವಾಯಿ ಹಿಂದೆ ಬರುತಾರೆ

ಕರಿಯಾನೆ ಕುದುಕ್ಕೋರೆ ವಾಡ್ಯಾಗಿ ಬರಿರೇಲ

ಈಡ್ಯಾಡೆನು ನಿಮ್ಮ ತಲಿಗಾಳ-ಈಡ್ಯಾಡದಿದ್ರೆ

ಪುಂಡಾ ಜಂಗಮರ ಮಗನಲ್ಲ

ಏಳೂರು ದೇವರ ಕಾಳಗ

ಮರಿಯಾನೆ ಕುದುಕ್ಕೋರೆ ವಾರಾಗಿ ಬರಿರೇಲ

ತೂರಾಡೆನು ನಿಮ್ಮ ತಲಿಗಾಳ-ಈಡ್ಯಾಡದಿದ್ರೆ

ಪುಂಡಾ ಜಂಗಮರ ಮಗನಲ್ಲ

ಪುಂಡಾನೆ ಜಂಗಮರ ಮಗನಲ್ಲ ಅಂದೇಳಿ

ಸಿಂಗಾರಿ ಬಿಲ್ಲ ಹೊಡುದಾನೆ ದಳವಾಯಿ

ಮುಂದಾಕೋಡೋಡಿ ಬರುತಾನೆ

ಮುಂದಾಕೋಡೋಡಿ ಬರುತಾನೆ ದಳವಾಯಿ

ವಡುನಾಳು ಕಣಿವಿಗೆ ಬರುತಾನೆ ತಿಮ್ಮಣ್ಣ

ಹನುಮಯ್ಯನ ಬಂದು ಮರಿಬಿದ್ದ

ಸಟ್ಟ ಸೆನಿವಾರೋ ನೆಟ್ಟನ ಮದ್ದನುದಾಗೆ

ಅಂಗೈಲು ನಾಮ ಧರಿಸೊ ಹನುಮಯ್ಯಾನ

ಹನುಮಯ್ಯನ ಬಂದೆ ಮರಿ ಬಿದ್ದ

ಬಂದಂತ ಬೆಸಮಗನ ಬೆನ್ನಿನಿಂದಿಟ್ಟುಕೊಂಡು

ಬಂದಾ ದಂಡುಗಳ ನೋಡುತಾನೆ-ಹನುಮಯ್ಯ

ಹೆಬ್ಬಾಲದ ಮರದ ಅವಕಿತ್ತ

ಹೆಬ್ಬಾಲದ ಮರವ ಅವಕಿತ್ತ ಹನುಮಯ್ಯ

ಬಟ್ಟೆ ಮೆಲ ಮಾಡಿ ಹಿಡಕಂಡ ಹನುಮಯ್ಯ

ಬಂದಾ ದಂಡುಗಳಾ ಸವುರಾನೆ

ನಮ್ಮೆಂಡಾರ ಮಕ್ಕಳಿಗೆ ಉಳಕಂಡು ಬಂದೀವಪ್ಪಾ ಬೀಜ

ನಿನ್ನ ಸಂಬಾಳಿಲ್ಲೀಗೆ ಬರತಾವು

ಬಂದಾ ದಂಡುಗಳೇ ಹೇಳ್ತಾರೆ ಸಿದ್ದಯ್ಯಗೆ

ಹನುಮಯ್ಯ ಅಂದು ನು ಕೇಳುತ್ತಾನೆ.

ಬಂದಾ ದಂಡುಗಳ ಹಿಂದಕ್ಕೆ ಕಳುವಿದೆ

ನನಗೇನು ಕೊಡುತೀಯೊ ಬೆಸುಮಗನೆ

ಏನಕೊಟ್ಟರೆ ಇರುವೋದೆ ಹನುಮಯ್ಯ

ಬಟ್ಟೆಣ್ಣೆ ಚಿಟ್ಟಕ್ಕಿ-ವರುಸಾಕೊಂದು ಸಾರಿ

ನಿನ ತೇರಾಗಾಲೀಗೆ ಕಳುಸೂವೆ

ನಿನ ತೇರಾಗಾಲಿಗೆ ಮೀಸಾಲು ಕಳುಸೂವೆ }

ದಳವಾಯಿ ತಿಮ್ಮಣ್ಣ ನುಡುದಾನೆ

ಹತ್ತು ಬಿರುದಿಗಿನ್ನು ಹೆಚ್ಚಿನ ಬಿರುದೈತೆ

ಹೆಚ್ಚಿನೊಕ್ಕಾಲೆ ನನಗೈತೆ-ಬ್ಯಾಲನೂರ

ಅದರಗು ನಿನ್ನೆಸುರ ಕರಸೂವೆ

ಗಂಡು ಹುಟ್ಟಿದರನುಮ ಹೆಣ್ಣು ಹುಟ್ಟದರನುಮಿತಿ

ಗಂಡೇಳ ಹೆಸುರಾ ಕರಸೂವೆ-ಹನುಮಯ್ಯ

ಹೆಣ್ಣೇಳ ಹೆಸುರಾ ಕರಸೂವೆ

ಮೊದಲುಟ್ಟಿದೆಸುರ ಕರಸೂವೆ ಹನುಮಯ್ಯ

ನಮ್ಮಪ್ಪನ ಬಳಿಗೆ ಕಳಿಕೊಡೋ

ವಡನಾಳ ಹನುಮಯ್ಯೋ ದಳವಾಯಿ ತಿಮ್ಮಣ್ಣಾನ

ಬಂದೂ ಅವನಾಗ ಕಳುವಾನೆ

ಕರಿ ಎಲಿಯ ಕಾಮ ಬಾರೋ ದಳವಾಯಿ

ಎಳಿಯ ಹೊಂಬಾಳೆ ಬಾರೋ

ದಳವಾಯಿ ತಿಮ್ಮಣೋ ತಲಿಗಳ ತಕ್ಕಂಡು

ತಲಬಾಗುಲೊಳಗೆ ಅವರವ್ವ-ಕಾಮಾಲೆ

ತಣಿಗೆದಾರುತಿಯ ಬೆಳಗ್ಯಾಳೆ

ಏಳೂರು ದೇವರ ಕಾಳಗ

ಆರುತಿ ಹಿಡುಕೊಂಡು ಅಂಗಯ್ಯ ನೊಂದಾವು

ಮುಂಗೈಯ್ಯಲವುಳು ಜಳಿರಾಮೆ-ಕಾಮವ್ವ

ಕಂದಗಾರುತಿಯ ಬೆಳಿಗ್ಯಾಳೆ

ಕಂದಗಾರುತಿಯ ಬೆಳಿಗ್ಯಾಳೆ ಕಾಮವ್ವ

ಕಂದನೊಳವಿಗೆ ಕರುದೊಯೊ

ದಳವಾಯಿ ತಿಮ್ಮಣ್ಣೋ ತಲಿಗಾಳ ತಂದಾನೆ

ಅವರಪ್ಪನ ಮಂಚಾಕೆ ಇಡುತ್ತಾನೆ

ತಂದಂತ ತಲಿಗಾಳ ತಂದೇಯ ಮುಂದಾಕೆ

ತಂದೆ ಮುಂದಾಕೆ ಇಡುತಾನೆ

ತಂದಂತ ತಲಿಗಾಳ ತಂದೆ ಹಿರಿಯ ನೋಡಿ

ಚಪ್ಪಾಳೆ ಹೊಡೆದು ತಲೆದೂಗಿ

ತಂದೆ ಹಿರಿಯಯ್ಯೋ ಚಪ್ಪಾಳೆ ಹೊಯ್ದು ಗಿ

ಏನಂದೆ ಆಗ ನುಡುದಾನೆ

ನೋಡಿಕ್ಯಂಡು ಬಾರಂದ್ರೆ ಮಾಡಿಕೊಂಡು ಬಂದೆಲ್ಲೊ

ಕಣಿಕ್ ಬಂದೆ ಗಡಿಯ ಜಗಳಾವ-ಅಂದೇಳಿ

ತಂದೆ ಹಿರಿಯಯ್ಯ ನುಡುದಾನೆ

ನಮ್ಮಪ್ಪೂನ ತಲೆಯೊ ನಾನೀಗ ತಂದೆನಪ್ಪ

ಮುನ್ನೂರಾನೆ ಕುದ್ರೆ ಮುನ್ನೂರು ಜನ ರಾವುತ್ತೂರು

ಅನವೇರಿ ಸಿದ್ದಯ್ಯ ಬಿಡಬಹುದೇ

ಸಿಗ್ಗು ದುಲೆ ನಾನೀಗ ಬಂದಿನಪ್ಪ ನಾನೀಗ

ವಡುನಾಳನುಮಯ್ಯ ಮರಿಬಿದ್ದು

ಅವು ನೀಗೆ ನಾನೀಗ ಮೀಸಾಲ ಕಳಸವೆ

ಹನುಮಯ್ಯಗೆ ಮೀಸಾಲ ಕೊಡಬೇಕೆ

ವಕ್ಕಾಲ ವಳಗೆ ಮಗನುಟ್ಟಿದೆಸುರ

ಮಗಳುಟ್ಟಿದೆಸುರ ಕರಸಪ್ಪೋ

ಏಳೂರು ದೇವರ ಕಾಳಗ

ಉಂಡುಟ್ಟು ಅವರೀಗ ಮನಿಗ್ಯಾರೆ ಅವರೀಗ

ಮಡುದಿ ಕಾಮಾಲೆ ಏನಂದೆ-ನುಡುದಾಳೋ

ಏನಂದು ಆಗ ಹೇಳುತ್ತಾಳೆ

ಅರಸಾ ನಿನ್ನಾ ಕುದುರೆ ಅರಸುಣುವ ಮೇದಾವೆ ತಾನಂದನ್ನಾನ

ಅರಿವಿಲ್ಲವೇನು ಹಿರಿಯಯ್ಯ ನಿನ್ನ ಕುದುರೆ

ವಾದಾವ್ವಾರಿ ಜಗಳಾಕೆ

ಹಿರಿಯಯ್ಯನಕ್ಕುದುರೆ ಕಡುಲೇಯ ಮೇದಾವು

ಕಾಳುಕ್ಕೆ ಕಾಲ ಕೆದುರಾವು-ನಿನಕ್ಕುದುರೆ

ದುಮುಕ್ಯಾವಾನ್ನೇರಿ ಜಗಳಾಕೆ

ಕಣಿಕಣಿ ರಟ್ಟೋರೆ ಕುಮಕುಮುದ ಮೀಸ್ಕೊರೆ

ಹುಬ್ಬಾ ಬಾಚೋರೆ ಹಿರಿಯಯ್ಯ-ನಿನಕ್ಕುದುರೆ

ಹೋದಾವಾನ್ವೇರಿ ಜಗಳಾಕೆ

ಇದುದಿದ್ದಂಗೆ ಎದ್ದಾನೆ ಹಿರಿಯಯ್ಯ

ಇಬ್ಬಾಣೆ ಹುಲ್ಲ ತುಳಿಕೊಂಡು-ಹೊನ್ನೇಬಾಗೆ

ದಿಬ್ಬುಕೊಗಿ ಡಿವ ವಡಿಕ್ಯಾನೆ

ದಿಬ್ಬುಕು ಡಿರ್‍ಯೇವ ವಡಿಸ್ಯಾನೆ ಬೀರೇಶ

ನ್ಯಾಯುಕು ಸಿದ್ದಯ್ಯನ ಕರಿಷ್ಯಾನೆ

ದುಮ್ಮಿ ಸಿದ್ದಯ್ಯೋ ಆನವೇರಿ ಸಿದ್ದಯ್ಯ

ಮೊಟುಬಳು ಚಿಕ್ಕಣ್ಣ ಬರಬೇಕು

ಗೋಷಿಕ್ಕರೆ ಸಿದ್ದಯ್ಯೋ ಬನಿಹಟ್ಟಿ ಸಿದ್ದಯ್ಯ

ಪಾಡೀಗಟ್ಟೈಯ್ಯ ಬರಬೇಕು. ಆಗಿನ್ನು

ನಾಕೂರ ಜನುರೇ ಬರುತ್ತಾರೆ

ಹೊನ್ನೇಬಾಗಿ ದಿಬ್ಬಾಕೆ ಬಂದಾರೆ ಅವರೀಗ

ಆಗ ಪಂಚಾಯ್ ಏನಂದು ಮಾಡುತ್ತಾರೆ

ಏನಂದಿರಿಯಯ್ಯನ ಕೇಳುತ್ತಾರೆ

ಏಳೂರು ದೇವರ ಕಾಳಗ

ಸಾವಾರದೊಕ್ಕಾಲು ಸರದಾರ ಹಿರಿಯಯ್ಯ
ಸಾವಾರದೊಕ್ಕಾಲು ಸಮರಂತ-ಹಿರಿಯಯ್ಯ
ಒಂದೊಕ್ಕಲಿಗ್ಯಾಕೋ ವಡುದಾಟ

ಹತ್ತೊಕ್ಕಲೊಳಗೆ ಒಂದೊಕ್ಕಲ್ವಾದಾರೆ
ಗುದ್ದಾಟವ್ಯಾಕೊ ಹಿರಿಯಯ್ಯ-ಅಂತೇಳಿ
ಬಂದೂರು ಜನರೇ ನುಡಿದಾರೆ

ನನ ಹಿಂಡೀನಾಗೆ ಕೂರಿ ಹಿಂಡದೆಪ್ಪಿ ಸ್ವಾದಾರೆ.
ಹುಡುಕ್ಕೋ ಬಾರದೇನೋ ಎಲಸಿದ

ನನ ಕಾಳ್ಯಾಳ ಕೂರಿ ಕಳದೆ ಸ್ವಾದಾರೆ
ನೋಡಿಕೊ ಬಾರದೇನೋ ಎಲಸಿದ್ದ-ಅಂತೇಳಿ
ಸ್ವಾಮಿ ಹಿರಿಯಯ್ಯೋ ನುಡುದಾನೆ

ಊಟಾಕೆ ಇಟ್ಟಿದ್ದೆ ಕೋಟೇಳುಸಾವುರ ಕೊಟ್ಟಿದ್ದೆ
ನನ್ನ ಕ್ವಾಟೆ ಬಲದಂಡೆ ಸಲವಿದಂತ ವಕ್ಕಲಿಗೆ
ವಡದಾಟವ್ಯಾಕೋ ಪರಚಂಡ

ಉಂಬಾಕೆ ಇಟ್ಟಿದ್ದ ಗೊಂಬೇಳ ಸಾವುರ ಕೊಟ್ಟಿದ್ದೆ
ಮಂದಿ ಬಲದಂಡೆ ಸಲವಿದಂತ-ವಕ್ಕಲಿಗೆ
ವಡುದಾಟವ್ಯಾಕೋ ಹಿರಿಯಯ್ಯ

ಆನೆಯ ಮ್ಯಾಲ ಬಂದಾರೆ ಲಾಬುಕೆ ಬಂದಾರಂದು
ಕೋಡಗಲ್ಲಾಗೆ ನಾವ್ ಬಂದ್ಯೋ-ತಾಳೀಕಟ್ಟೆ
ಬೀರೇಶನೋರಾಟ ಬಿಡುವಲ್ಲೋ

ಕುದುರಿ ಮ್ಯಾಲೆ ಬಂದಾರೆ ಲಂಚಕು ಬಂದಾರಂದು
ತರಿಯ ಕಲ್ಲಾರೆ ನಾವ್ ಬಂದ್ಯೋ-ತಾಳೀಕಟ್ಟೆ
ಹಿರಿಯಯ್ಯ ಹೋರ್‍ಯಾಟ ಬಿಡುವೊಲ್ಲ

ಯಾವಾಗ ನೋಡಿದುರೆ ಕೊಂದಾಟ ಕಡುದಾಟ
ಅಂದೋನೆ ಅಲ್ಲೋ ಹಿರಿಯಯ್ಯೋ-ಅಂದೇಳಿ
ದುಮ್ಮಿ ಸಿದ್ದಯ್ಯೋ ನುಡುದಾನೆ

ಬುದ್ದಿವಂತಾರಂದು ಇದ್ದಲ್ಲಿ ಕರಸೀದೆ
ಕದ್ದು ಪಂಚಾಯ್ತಿ ನುಡುದೆಲ್ಲೋ ದುಮ್ಮಿ ಸಿದ್ದ
ಇದ್ದ ಡಿರ್‍ಯೇವ ಬಿಟ್ಟೇ ನಡಿ ಅಂದ

ಇದ್ದ ಡಿರ್‍ಯೇವ ಬಿಟ್ಟು ಎದ್ದು ಹೋಗಾದಿದ್ರೆ
ರಟ್ಟೆಯಾ ಹಿಡುದು ಎಳಸವೆದುಮ್ಮಿಸಿದ್ದ ವ
ಎದ್ದು ಬಂದು ಮುರು ಗುದ್ದ ಬಿಡುತೀನಿ

ರಟ್ಟೆಯ ಹಿಡುದು ಎಳಿಸ್ಯಾನೆ ಹಿರಿಯಯ್ಯ
ಎದುಬಂದು ಮುರು ಗುದ್ದ ಬಿಡುತ್ತಾನೆ

ಬಣ್ಣಾದ ಅಂಗೀಗೆ ಚನ್ನಾಂಗದ ಕರೆ ಹೊಯ್ದು ಆಟಲ

ಕನ್ನ ಕತ್ತಿಗುಳ ತಗುದಾ ಮೊಟುಬಳ್ಳು ಚಿಕ್ಕಣ್ಣ ಗ

ಮೊಸದಿಂದ ಕೊಂದ ಬಲಗೆಪ್ಪೆ

ಮೊಸದಿಂದ ಕೊಂದ ಬಲಗೆಪ್ಪೆ ಹಿರಿಯಯ್ಯ

ಗಯವಾದನಂತೆ ರಣದಾಗೆ

ಚನ್ನಾದ ಅಂಗೀಗೆ ಬಣ್ಣಾದ ಕರೆ ಹೊಯ್ದು

ಸಣ್ಣ ಕತ್ತಿಗುಳೋ ತಗುದಾನೆ-ಮೊಟುಬಳ್ಳು ಚಿಕ್ಕಣ್ಣ

ಮೊಸದಿಂದ ಕೊಂದೋ ಪರಗೆಪ್ಪೆ

ಏಳೂರು ದೇವರ ಕಾಳಗ

ಗಯವಾದನಂತೆ ರಣುದಾಗೆ ಹಿರಿಯಯ್ಯ

ಮತುನಾದನಂತೆ ರಣುದಾಗೆ ಬೀರೇಶ

ಹೊನ್ನೆಬಾಗಿ ದಿಬುದಾಗೆ ಮನಿಗ್ಯಾನೆ

ಬಾಳೇಯ ವನುದಾಗೆ ಬಾಳೆಯ ಗಿಡುದಾಗೆ

ಬಾಲರಾಜಣದ ಬಯಲಾಗೆ-ಹಿರಿಯಯ್ಯ

ಹೀಡ್ಯಾಡ್ಯನವರ ತಲಿಗಾಳ

ನಿಂಬೇಯ ವನುದಾಗೆ ನಿಂಬೇಯ ಗಿಡುದಾಗೆ
ಹಿಂಗರಾಜಣದ ಬಯಲಾಗೆ-ಹಿರಿಯಯ್ಯ
ಹೀಡ್ಯಾಡುತಾನ ತಲಿಗಾಳ

ಹೀಡ್ಯಾಡುತ್ತಾನವ್ರ . ತಲಿಗಾಳ ಹಿರಿಯಯ್ಯ
ಮತುನಾದನಂತೆ ರಣುದಾಗ

ಮಡುದಿ ಕಾಮಾಲೆ ಮಗನು ದಳವಾಯಿ ತಿಮ್ಮಣ್ಣ
ಅವರಿಬ್ಬರೂ ಗೋಳ್ಯಾಡಿ ಬರುತ್ತಾರೆ

ಎಲ್ಲಿಗೋಗಿದ್ದ್ಯೋ ದಾಳ್ಳಾಳಿ ಹಿರಿಯಯ್ಯ
ವಾಲ್ಯಾಲ್ಲಾ ರಾಣ ರೈತಾವೆ-ಹೊನ್ನೇಬಾಗಿ
ದಿಬುದಾಗಿರಿಯಯ್ಯ ಮಲಗ್ಯಾನೆ

ಪುಂಡಗಾರ ಹಿರಿಯಯ್ಯೋ ಉಂಡಾರೆ ಹೋಗಲಿಲ್ಲ
ಗಂದಾದಿವ ಹಿಡುದಿಲ್ಲ. ಅಂತೇಳಿ
ಮಡುದಿ ಕಾಮಾಲೆ ನುಡುದಾಳೆ

ಮಡುದಿ ಕಾಮಾಲೆ ನುಡುದಾಳೆ ಹಿರಿಯಯ್ಯ
ಮಗನು ದಳವಾಯಿ ಕರುದಾನೆ

ಕೆಪ್ಪೆ ಮ್ಯಾಗಳ ಗಾಯೋ ಒಪ್ಪಪ್ಪಗೆ ಬಿಗಿ ಮಗುನೆ
ಕತ್ತೀಯ ತಾರೋ ನನಕೈಲಿ ನನ ಮಗುನೆ
ಗಾಡಾನೊಂದ್ವಾಲೆ ಬರಿ ಮಗುನೆ

ಕೆನ್ನೆ ಮ್ಯಾಗುಳ ಗಾಯೋ ಅಣ್ಣಣ್ಣಿ ಬಿಗಿನಗುವೆ...

ಕಾಲ್ಸೇವ ತಾರೊ ನನಕೈಲಿ ನನ ಮಗುನೆ

ತಪ್ಪಾನೊಂದ್ದಾಲೆ ಬರಿ ಮಗ್ಗನೆ

ಅರಿವೇಳಿಕೊಡಪ್ಪೋ ಕುರುವೇಳಿಕೊಡಪ್ಪ

ಅರಿವಿಲ್ಲದ್ವಾಲೆ ಬರಿಲ್ಯಾಂಗೋ

ಗೊತ್ತೇಳಿ ಕೊಡಪ್ಪೋ ಮತ್ತೇಳಿ ಕೊಡಪ್ಪೋ

ಗೊತ್ತಿಲ್ಲದ್ವಾಲೆ ಬರಿಲ್ಯಾಂಗೋ

ಬಡಗಲಿಂದ ಬಂದಿವಪ್ಪೋ ಏಳುಜನ ತಮ್ಮುಗಳು

ತುಪ್ಪದಳ್ಳಿ ವಳಗೆ ಉಳಿಪೈಣ. ಮಲ್ಡಿದ್ದಾರೆ

ಕಣಿವೆ ಮ್ಯಾಲಾಕೆ ನೆಡದೋದ

ಕಣಿವೆ ಮ್ಯಾಲಾಕೆ ನೆಡದೋದ ಶಿವನೇಯ

ಹೊನ್ನುಪ್ಪರಿಗವ್ರ ಅರಮನೆ-ಶಿವನೇಯ

ಮಲ್ಲೆಪ್ಪನೆಸುರ ಮೊದಲಿಡೊ

ಮಲ್ಲೆಪ್ಪನೆಸುರಿ ಮೊದಲಿಡೊ ತಿಮ್ಮಣ್ಣ

ನಿಂಗಣ್ಣನೆಸುರ ಕಡಿಗಿಡೊ-ಮುಗಳೀಯ

ತಿಮ್ಮಣ್ಣನೆಸುರ ಕೊನಿಗಿಡೊ

ತಿಮ್ಮಣ್ಣನೆಸುರ ಕೊನಿಗಿಡೊ ನನಕಂದ

ಮಂತುರಿಗೆ ವಾಲಿ ಬರಿ ಮಗುನೆ

ಆಲೂರು ಬೇಲೂರು ಮೇಲಾದ ದಂದೂರು

ಅದ್ರ ವಾರಿಗೈತಪ್ಪೋ ಎಳಿಯಾಲದಯ್ಯಾನ

ವಾಗುರಿಗೆ ಮಾಟ ಬರಿಮಗುನೆ

ಹತ್ತೂರು ಮತ್ತೂರು ಹೆಚ್ಚಿನ ದಂದೂರು

ಅದರೆಗೈತಪ್ಪೋ ಎಳಿಯಾಲದಯ್ಯಾನ

ಉಪ್ಪರಿಗೆ ಮಾಟ ಬರಿ ಮಗುನೆ

ಉತ್ತೂರ ಬರಿಯೋರಿಗೆ ಹಚ್ಚಾರೆ ಶಿವದಾರ

ಮತ್ತೆ ಸಾಂಬ್ರಾಣಿ ಉಡುದಾರ

ವಾಲೆ ಬರಿಯೋರಿಗೆ ಹಾಕ್ಯಾರೆ ಶಿವದಾರ

ಮ್ಯಾಲೆ ಸಾಂಬ್ರಾಣಿ ಉಡುದಾರ ಶಿವನೇಯ

ವಾಲೆಯ ಬರಿಯೋ ಬೆಸಮಗ್ಗೆ

ಏಳೂರು ದೇವರ ಕಾಳಗ

ಹಿಂದಲ ಪಾದದ ಮ್ಯಾಲೆ ಮುಂದಲ ಪಾದಾನೂರಿ
ಮುಂಬಾಗಿ ವಾಲೆ ಬರಿಮಗುನೆ-ತಿಮ್ಮಣ್ಣ
ಉಂಗುರದ ಬೆಳಕೆ ಪ್ರಜಿಗೆಲ್ಲಾ

ಉತ್ತಾರ ಒಯ್ಯಾನಿಗೆ ತುಪ್ಪ ಬಾನಾನಿಟ್ಟು
ಮತ್ತೊಂದಿವು ಮೆಲಕೊಡೆ

ವಾಲೆಯ ಒಯ್ಯನಿಗೆ ಹಾಲು ಬಾನಾನಿಟ್ಟು
ಮೇಲೊಂದಿಳ್ಳೇವು ಮೆಲಕೊಡೆ-ಶಿವನೇಯ
ವಾಲೆಯ ಒಯ್ಯೋ ಬೆಸಮಗ್ಗೆ

ಆಗ ಈಗಂಬುತೊ ಹೋಗುತ ಮಾತಡಬ್ಯಾಡ
ಜೂಜೀಗೊಂದೆಲೆಯಾ ಮೆಲಬ್ಯಾಡ-ಶಿವನೇಯ
ಮಾರಾಯಗೀ ವಾಲೆ ತಲುಸ್ಸಪ್ಪೋ

ಅಂತ ಇಂತಂಬುತೊ ನಿಂತು ಮಾತಡಬ್ಯಾಡ
ಚೆಂಚಿಗೊಂದೆಲೆಯಾ ಮಲಬ್ಯಾಡ-ನನ ಮಗುನೆ
ಮಾರಾಯಗೀ ವಾಲೆ ತಲುಸ್ಸ

ಹತ್ತು ಮಾರುದ್ಯೋ ಹೊತ್ತಿಗೆ ತಕ್ಕೊಂಡು
ರಾಯರ ಕಣಿವೀಗೆ ದಣದಾನೆ

ಆರು ಮಾರುದ್ದೋ ಹೊತ್ತೀಗೆ ತಕ್ಕೊಂಡು

ರಾಯರ ಕಣಿವೀಗೆ ದಣದಾನೆ

ಜೋಡ ಸಿಂಗೇನಳ್ಳಿ ಒಲಿ ತುಪ್ಪಾದಳ್ಳಿ

ರಾಯರ ಪಾದಕ್ಕೆ ದಣುದಾನೆ

ಒತ್ತೀಲಿ ತುಪ್ಪಾದಳ್ಳಿ ಒಲಿ ಸಿಂಗೇನಳ್ಳಿ

ರಾಯರ ಪಾದಾಕೆ ದಣುದಾನೆ

ತರಿಗಲ್ಲು ಹಿಟ್ಟಾದು ಕಗ್ಗಲ್ಲೇ ಪುಡಿಯಾದು

ತರಿಯಾಲದ ಮರವೇ ಬಯಲಾದು-ತಿಮ್ಮಣ್ಣ

ವಾಲೇಯ ಒಯ್ಯೋ ರಭಸಾಕೆ

ವಾಲೇಯ ಒಯ್ಯೋ ರಭಸಾಕೆ ದಳವಾಯಿ

ವಾಲೇಯನಾಗ ತರುತಾನೆ

ಹತ್ತು ಮಾರುದ್ದ ಹೊತ್ತಿಗೆ ತಕ್ಕೊಂಡು
ಕಟ್ಟೆಯ ಮ್ಯಾಲೆ ದೊರಿಬಂದ ತಿಮ್ಮಣ್ಣ
ಅವನಿಟ್ಟ ನಾಮುಗಳೇ ಬೆವುತಾವೆ

ಆರು ಮಾರುದ್ದೋ ವಾಲೇಯ ತಕ್ಕೊಂಡು
ಕೆರಿ ಏರಿಮ್ಯಾಲೆ ದೊರಿಬಂದ ತಿಮ್ಮಣ್ಣ
ನೀಲಿ ನಾವುಗಳೇ ಬೆವುತಾವೆ

ಉಂಬಾಕೆ ಬುತ್ತಿಲ್ಲೋ ಉಳಿಯಾಕೆ ಹೊತ್ತಿಲ್ಲೊ
ನಡೆಯಾಕೆ ದಾರಿ ಸಮನಿಲ್ಲೋ-ಶಿವನೇಯ
ಮಾರಾಯಗೀ ವಾಲೆ ತಲುಪಲಿಲ್ಲ.

ಮಾರಾಯಗೀ ವಾಲೆ ತಲುಪ್‌ಲಿಲ್ಲ ಅಂತೇಳಿ
ಹೆಬ್ಬಾಗುಲಿಗಾಗ ಬರುತಾನೆ-ತಿಮ್ಮಣ್ಣ
ಬಾಗುಲ ಗೊಳ್ತಾರೆ ತಡುದಾರೆ

ಸ್ವಾಮಿ ಮುಳುಗ್ಯಾವು ದೂಳ್ ಚಂಜೆ ಆದಾವು
ಹೆಬ್ಬಾಗುಲವುರೆ ಹಾಕುತ್ತಾರೆ-ತಿಮ್ಮಣ್ಣ
ಬಾಗುಲ ಗೊಲ್ಲಾರೆ ತಡುದಾರೆ

ಅತ್ತೆ ಮನೆ ಸ್ವಾಸೆ ಹೊತುದೆ ನೀರಿಗೆ ಬಂದೊ
ವಂಡದ ನೀರಿಗೆ ಬರುತ್ತಾಳೆ

ರಾಯ ಶಿವನೇಯ ನಾರೇರ ಕೊಡದ ಮ್ಯಾಲೆ

ಪುನಗಿನ ಬೆಕ್ಕಾಗಿ ಒಳಹೊಕ್ಕ

ಚಿಕ್ಕ ಶಿವನೇಯ ನಿಯ ಕೊಡದ ಮ್ಯಾಲೆ

ಪುನಗಿನ ಬೆಕ್ಕಾಗಿ ಒಳಹೊಕ್ಕ-ನಿಂಗಣ್ಣ

ಅಣ್ಣ ನಿಂಗಣ್ಣನೊ ಹುಡುಕ್ಯಾನ

ಹತ್ತು ಮಾರುದ್ರೋ ಹೊತ್ತಿಗೆ ತಕ್ಕೊಂಡು

ಪಟ್ಟಾಣನೆಲ್ಲೋ ಹುಡುಕ್ಯಾನೆ-ಶಿವನೇಯ

ಅಣ್ಣ ನಿಂಗಣ್ಣನೋ ಸುಳವಿಲ್ಲ

ಏಳೂರು ದೇವರ ಕಾಳಗ

ಆರು ಮಾರುದ್ಯೋ ಗ್ಯಾನಾವ ಹಿಡಕಂಡು

ಕೇರಿ ಕೇರಿಗುಂಟೇ ಬರುತಾನೆ ದಳವಾಯಿ

ಬಾಲಾ ನಿಂಗಣುನ ಸುಳವಿಲ್ಲೋ

ಹಟ್ಟಿಯ ಕಸವೋ ಅತ್ತ ಗುಡುಸೂವಮ್ಮ

ಯತುಲೇ ನಿಂಗಣುನೋ ಅರಮನೆ-ತೋರಿದೋರಿಗೆ

ವಾಲಿಗೊಜ್ಜುರವೋ ಇಡಸೂವೆ

ಅಂಗಳ ಕಸವೋ ಅಂಗೇ ಗುಡುಸೋ ತಾಯಿ

ಯಂಗೇ ನಿಂಗಣುನೋ ಅರಮನೆ-ತೋರಿದೋರಿಗೆ

ಬಂದಿಗು ಬಂಗಾರ ಇಡಸನೆ

ಅಂದವೊಳ್ಳೆ ತೋಳಿಗೆ ಚಂದವೊಳ್ಳೆ ಪುಟ್ಟಣಿಕಣ

ವಾಲೆ ಮುಂದಾಕೆ ಗಜಮಲಕು-ಇಟಗಂಡು ಸಿಟ್ಟರಸಿ

ಗಂಡಾನ್ವಾಲ್ಯಾವುಕೆ ನಡುದಾಳೆ

ಬಾಗೂತ ಬಳುಕುತ ಜಾಗೃತ ಜಳುಕುತ

ಅಕೆ ಜರತಾರ ನೆಲಕೆ ಎಳಲೂತ-ಪಿಟ್ಟರಸಿ

ಗಂಡಾನ್ವಾಲ್ಯಾವ್ ಬರುತಾಳೆ

ಗಂಡಾನ್ಸಾಲ್ಯಾನ್‌ಕೆ ಬರುತಾಳೆ ಪಟ್ಟವ್ವ

ಬಟ್ಟೇಲಿ ಆಗ ತೋಯ್ಯಾರೆ

ಪಿಟ್ಟರಸಿ ಹಿಂಬಾಲು ಹಿಡಕಂಡು ತಿಮ್ಮಣ್ಣ

ಅಣ್ಣಾನರಮನಿಗೆ ಬರುತಾನೆ

ಅಣ್ಣಾನರಮನಿಯ ಬಾಗಲಾಗೆ ನಿತುಕೊಂಡು

ದಳವಾಯಿ ತಿಮ್ಮಣ್ಣ ನೆಲಿಗೊಂಡು

ಎಲ್ಲಿಂದ ಬಂದೆಪ್ಪೋ ಬಲ್ಲಿದರ ಬೆಸಮಗುವೆ

ನೆಲ್ಲು ಹೊಯ್ತುಂಗೆ ಮಕ ಬೆವುತು

ಯತಲಿಂದ ಬಂದೆಪ್ಪೋ ಮುತ್ತಿನಂತ ಬೆಸಮಗುವೆ

ಮುತ್ತ ಹೊಯ್ತಂಗೆ ಮಕಬೆವುತು-ಬೆಸಮಗುನೆ

ಯಾವ ನಾಡಿನ್ ದೊರೆ ಮಗುನೋ

ಏಳೂರು ದೇವರ ಕಾಳಗ

ಎಲ್ಲೇನು ನಾನಲ್ಲೋ ಎತುಲೋನು ನಾನಲ್ಲೋ

ಯೇಳೂರಿಗೆಲ್ಲಾ ಯಜಮಾನ-ತಾಳೀಕಟ್ಟಿ

ಹಿರಿಯಯ್ಯನ ಮಾನೆ ಬೆಸಮಾಗ

ಯತುಲೋನು ನಾನಲ್ಲೋ ಎಂತೋನು ನಾನಲ್ಲೋ

ಏಳೂರಿಗೆಲ್ಲಾ ಅದಿಪೋತಿ-ತಾಳೀ ಕಟ್ಟೆ

ಬೀರೇಶನ ಮನಿಯ ಬೆಸಮಾಗ

ಬೀರೇಶನ ಮನೆಯ ಬೆಸಮಗ ಅಂತೇಳಿ

ವಾಲೆ ಮಂಚಾಕೆ ವಗುದಾನೆ

ಮಗುದಂತ ವಾಲೆಯೋ ತಕ್ಕೊಂಡು ನಿಂಗಣ

ವಾಲೇಯ ವಡುದೇ ಓದುತಾನೆ-ಆನಾವೇರಿ

ಕಾಳುಗದ ಕತಿಯ ಬರುದ್ಯೆತಿ

ಕಾಳುಗದ ಕತಿಯ ಬರುದ್ಯೆತಾನಾವೇರಿ

ಕನ್ನಪ್ಪನ ಕತಿಯ ಬರುದ್ಯೆತಿ

ಅಪ್ಪನ ಮಗ ಬಂದಾ ಅಂದು ಹತ್ತಿದ ಮಂಚ ಇಳುದು

ತಮ್ಮನ ತಬ್ಬಾಕಿ ಅವುಚಾನೆ-ನಿಂಗಣ್ಣ

ಅವನೇರಿದು ಮಂಚಾಕೆ ಕರೆದೊಯ್ದು

ಸಣ್ಣಕ್ಕಿ ಪಡಿಗೊಡಿರೆ ಭದ್ರೇರ್ ಇಟ್ಟೇವ್ ಕೊಡಿರೆ

ತಪ್ಪಾನೊಂದಡಿಗೆ ದುಡಮೀರೆ

ದೊಡ್ಡಕ್ಕಿ ಪಡಿಗೊಡಿರೆ ಕನ್ನೇ ಇಟ್ಟೇವ್ ಕೊಡಿರೆ

ಗಾಡಾನೊಂದಡಿಗೆ ದುಡಮರೆ

ಬಂದ ತನ್ನಾಗೆ ಶರಣು ಸಂಪತ್ತಾಗಿ

ಯಡಿಯಾ ಬಿಡಾರ ಮಾಡಿಸ್ಯಾನೆ-ನಿಂಗಣ್ಣ

ತಮ್ಮನ ಕಳುವಾಕೆ ಹೊರಟಾನೆ

ತಮ್ಮನ ಕಳುವಾಕೆ ಹೊರಟಾನು ನಿಂಗಣ್ಣ

ಶಿವುನೇ ಕಾವುಲಾಗೆ ಬರುತ್ತಾರೆ

ಏಳೂರು ದೇವರ ಕಾಳಗ

ತಮ್ಮನ ಕಳುವಾಕೆ ಎಲ್ಲಿಗೆ ಹೊರಟಾನೆ

ಕ್ಯಾತೂರ್ ನಿಂಗಣುನ ಗುಡಿಮುಟ್ಟ

ಇಂದೇ ಬರುತೀನಿ ಕಣೋ ಬಂಟ ನಿನ್ನ ಕ್ಯಾಮಾರ

ಗಂಜೀಹಚ್ಚಡದ ಘನ ಭೋಗಿ-ದೊಡ್ಡಪ್ಪ

ನಾನತ್ತೇ ತಾಸಿಗೆ ಬರತೀನಿ

ವಾಗೀ ಬರುತೀನಿ ಕಣೋ ಬಂಟ ನಿನ್ನ ಕ್ಯಾಮಾರ

ಸಾಲಿ ಹಚ್ಚಡದ ಘನಭೋಗಿ ದೊಡ್ಡ ಪ್ಪ

ನಾನಾರೆ ತಾಸಿಗೆ ಬರುತೀನಿ

ನಾನಾರೆ ತಾಸಿಗೆ ಬರುತೀನಿ ದೊಡ್ಡಪ್ಪ

ಏರಿದ ಮಂಚ ಇಳಿಬ್ಯಾಡೊ

ಮತ್ತೆ ಬರುತೀನಿ ಕಣೋ ಬಂಟ ನಿನ್ನ ಕ್ಯಾಮಾರ

ಏಳೂರು ಬಲಗೊಂಡೆ ಬರತೀನಿ-ನಮ್ಮಪ್ಪ

ಏರೀದ ಮಂಚ ಇಳಿಬ್ಯಾಡೋ

ಮಂದೀನ ಬಲಗೊಂಡೆ ಬರುತೀನಿ ದೊಡ್ಡಪ್ಪ

ಹತ್ತಿರೊ ಮಂಚ ಇಳಿಬ್ಯಾಡೋ

ಹಿಂದೆ ಬರುವ ವಾಲೆ ಮುಂದಾಗಿ ಬಂದಿದ್ರೆ
ಮಂದಿ ಬಲಗೊಂಡೆ ಬರತಿದ್ದೆ -ದೊಡ್ಡಪ್ಪ
ಗಯವಾದ ಮ್ಯಾಲೆ ಕಳಬಹುದೆ

ಆಗ ಬರುವ ವಾಲೆ ಈಗಾನೆ ಬಂದಿದ್ರೆ
ಏಳೂರ ಬಲಗೊಂಡೆ ಬರತಿದ್ದೆ-ನಮ್ಮಪ್ಪ
ನೊಂದುಕೊಂಡ ಮ್ಯಾಲೆ ಕಳಬಹುದೆ

ನೊಂದುಕೊಂಡ ಮ್ಯಾಲೆ ಕಳಬಹುದೆ ಅಂತೇಳಿ
ಶಿವನೇ ನಿಂಗಣ್ಣೋ ನುಡುದಾನೆ

ತಮ್ಮ ನಿಂಗಣ್ಣನೋ ಕಳುವ್ಯಾನೆ ನಿಂಗಣ್ಣ
ತಳಮನಿಗೆ ಆಗ ಬರುತ್ತಾನೆ

ಏಳೂರು ದೇವರ ಕಾಳಗ

ಕಣಿವೆ ಕೆಳಗ್ಲಿಂದೋ ಗಾರೆ ಚಾವುಡಿಂದೊ
ಈಡ್ಯಾಡುತ ಬಂದೋ ಹೊಸವಾಲೆ ಮಕ್ಕುಳಿರಾ
ವಾಲುಗದ ಕೈಯ್ಯೋ ನಿಲುಗ್ರಪ್ಪೋ

ತಾಳಿಕಟ್ಟಿಂದೋ ಮುತ್ತಿನ ಚಾವೂಡಿಂದೊ
ಇಟ್ಟಾಡುತ ಬಂದೋ ಹೊಸವಾಲೆ-ಮಕ್ಕುಳಿರಾ
ದೊಳ್ಳೀನ ಕೈಯೋ ನಿಲುಸ್ರಪ್ಪೋ

ನಮ್ಮಪ್ಪನ ಮರದಿಂದೊ ಮುತ್ತಿನ ಚಾವೂಡಿಂದೊ

ತೂರಾಡುತ ಬಂದೋ ಹೊಸವಾಲೆ ಮಕ್ಕುಳಿರಾ

ಕರಡೇಯ ಕೈಯೋ

ನಿಲುಸ

ಕರಡೇಯ ಕೈಯ್ಯೋ ನಿಲುಗ್ರಪ್ಪೋ ಅಂತೇಳಿ

ಬಾಲಾ ನಿಂಗಣ್ಣೋ  ನುಡುದಾನೆ

ಉಪ್ಪರಿಗೆ ಒಳಗೀರೋಳೆ ಒಪ್ಪವಳ್ಳಿ ಕಾಮಾಲೆ

ತಪ್ಪಾನೇಳವೋ ಬೆಳಗಾದೊ-ತಾಳೀಕಟ್ಟೆ

ದೊಡ್ಡಪ್ಪನಂತೆ ನಮಗೆ

ದೊಡ್ಡಪ್ಪನಂತೆ ನಮಗೆಲ್ಲೊ ತಾಳೀಕಟ್ಟೆ

ಗಯವಾದನಂತೆ ರಣುದಾಗೆ-ನಮ್ಮವ್ವ

ಗಡಿನಾಡಿಗು ನನ್ನ ಕಳಿಕೊಡೆ

ಒಪ್ಪೋಳ್ಳೆ ಕಾಮಾಲೆ ಇದ ಕೇಳೆ ನಮ್ಮವ್ವ

ದೊಡ್ಡಪ್ಪನಂತೆ ನಮಗೆಲ್ಲ-ತಾಳೀಕಟ್ಟಿ

ಮತುನಾದನಂತೆ ರಣುದಾಗ

ಮತುನಾದನಂತೆ ರಣುದಾಗೆ ನಮ್ಮವ್ವ

ಕಾಳುಕ್ಕೆ ನನ್ನ ಕಳಿಕೊಡೆ-ಅಂತೇಳಿ

ಬಾಲಾ ನಿಂಗಣ್ಣ ನುಡುದಾನೆ

ವದ್ದೊದಿಕೆ ಮಾಸ್ಯಾವೆ ಬದ್ದೋರಿ ನಿನ್ ಕೇಳೆ

ಇದ್ದಾ ನೇನರಸಿ ಮಡಿವಾಳ-ದಂದೂರ

ಮಡಿವಾಳನೋಗಿ ಕರುತಾರೆ

ಏಳೂರು ದೇವರ ಕಾಳಗ

ನಿಂಗಣ್ಣೇಳಿದ ಮಾತು ಪಿಟ್ಟರಸಿ ಕೇಳ್ಯಾಳೆ..

ವಾದಳು ದಂದೂರ ಒಳವಿಗೆ

ಜಾಗುತ ಜಳುಕುತೊ ಜಾಗೂತ ಜಗ್ಗತ

ಜರತಾರ ನೆಲಕೆ ಎಳಲೂತ-ಪಿಟ್ಟ ವ್ವ

ಹೋಗಿ ಮಡಿವಾಳನ ಕರುತಾಳೆ

ಎಂದೂ ಬಾರದ ಪಿಟ್ಟವ್ವ ಹೀಗ್ಯಾಕೆ ಬಂದೆವ್ವ

ಕುಂಡಾರಗೊಳ್ಳೆ ಮಣಿಗಾಳ

ಕುಂಡ್ರಾಕೆ ಬಂದಿಲ್ಲೋ ನಿಲ್ಲಾಕೆ ಬಂದಿಲ್ಲೊ

ಬಂದೋಗು ಬಾರೋ ಮನೆಮುಂಟ

ಬಂದಾನೆ ಮಡಿವಾಳ ನಿಂದಾನಂಗುಳುದಾಗೆ

ನಿಂಗಣ್ಣಗೆ ಕರವ ಮುಗುದು-ಕೇಳ್ಯಾನಲ್ಲೆ

ಕರಸೀದ ಕಾರುಣದ ಬಗಿಯೇಳು

ನಾಳೀಕೆ ನಾವು ಕಾಳುಕ್ಕೋಗುತೀವಿ

ಬರುತೀಯೇನಯ್ಯ ಮಡಿವಾಳ್

ಇಂದೇನೆ ನಾವು ದಂಡಿಗೋಗುತೀವಿ

ಬರುತೀಯೆನಯ್ಯ ಮಡಿವಾಳ್

ಕಾಳುಗೆಂಬುದು ಸ್ವಾಮಿ ಕಾವೇರಿ ಪಟ್ಟಣ

ಗುಂಡು ತಾಕಿದುರೆ ಸತಗಾತು-ನಿಂಗಣ್ಣ

ಮಕ್ಕಳಿಗಿನ್ನಾರು ವಡಿಕ್ಕಾರು

ಕಾಳುಗಂಬುದು ಸ್ವಾಮಿ ಗಂಡುಗಾರೇ ಮುಳ್ಳು

ಗುಂಡು ತಾಕಿದುರೆ ಸತಗಾತು-ನಿಂಗಣ್ಣ

ಮಕ್ಕಳಿಗಿನ್ನಾರು ವರಿಕ್ಕಾರು

ವಾದಾ ದಂಡಿನಾಗೆ ತೀರಿದುಂಟಾದರೆ

ಯಂಬತ್ತೆ ಹೊನ್ನು ಪಡಿಗಟ್ಟೆ-ತಾಳೀಕಟ್ಟೆ

ತಂದೆ ದಳದಾಗೆ ಕೊಡಸೂವೆ

ನನ ತಂದೆ ದಳದಾಗೆ ಕೊಡಸನೆ ಮಡಿವಾಳ
ಬರತೀಯೇನಯ್ಯ ನಮಕೂಟ

ದಂದೂರು ಅಂಭೋದು ಗಂಡುಭೂಮಿ ಕೊಡುವೆ
ಹಿಂಡೀನ ಕುರಿಯೋ ಹೊಡಕೊಡುವೆ-ಮಡಿವಾಳ
ಮಾನ್ಯಾವಾಕುಸುವೆ ಮಗನೀಗೆ

ಮಾನ್ಯಾವಾಕುಸುವೆ ಮಗನೀಗೆ ಮಡಿವಾಳ
ಮಾನ್ಯಾವ್‌ದೊಕ್ಕಾಲ ಕೊಡುತೀನಿ ಮಡಿವಾಳ
ಬರುತೀಯೇನಯ್ಯೋ  ನಮಕೂಟೆ

ಗೋಷಿಕೆರಿಯಯ್ಯೋ ಸಾಸ ಬಲ್ಲಿಗೆ ಕಾಣೆ
ಕಾತೆ ನೀನೋಗಿ ಕರುತಾರೆ-ಅನ್ನೇನಳ್ಳಿ
ಜಾಲ್ಯಾಗೆ ವಾಲೆ ಬರಿಯೋರೆ

ಈರಕಾಮಯ್ಯೋ ಮಾತೀಲಿ ಸುಗಜಾಣ
ನಲ್ಲೆ ನೀನೋಗಿ ಕರುತಾರೆ ಈರಾಪುರದ
ತುರುಮಂಧ್ಯಗ್ವಾಲೆ ಬರಿಯೋರ

ಚಳ್ಳಕೆರೆಯಯ್ಯೋ ಮಾತೀಲಿ ಸಮರಂತ
ನಲ್ಲೆ ನೀನೋಗಿ ಕರುತಾರೆ-ಈರಾಪುರದ
ಹಳ್ಳೊಲ್ಡಾಗ್ವಾಲೆ ಬರೆವೋರ

ಕಾತುರದ ಸೀಮ್ಯಾಗೆ ಮಾತುಗಾರ್ ಮುಗಳಿ ತಿಮ್ಮಣ್ಣ

ಕಾತೆ ನೀನೋಗಿ ಕರುತ್ತಾರೆ-ಈರಾಪುರದ

ತೊಪ್ಪಿನಾಗೆ ವಾಲೆ ಎರೆವೋರ

ವೀರ ಬಸವಣ್ಣೋ ಮಾತೀ ಸುಗಜಾಣ

ಕಾತೆ ನೀನೋಗಿ ಕರುತಾರೆ ಈರಾಪುರದ

ತೊಪ್ಪಿನಾಗೆ ವಾಲೆ ಬರೆವೋರ

ಏಳೂರ ಮೈದುನುರ ಕರುದೋನೆ ಬರುತೀನಿ

ಮುಗುಳೀ ಮೈದುನರೊ ಕರಿಲಾರೆ ನಾನೀಗ

ಬೆಂಕಿಯಿದುರಿಗೆ ನಿಲುಲಾರೆ

ಏಳೂರು ದೇವರ ಕಾಳಗ

ಏಳೂರು ಮೈದುನುರು ಕರುದೇನು ಮಾರಾಯ

ಮುಗುಳಿ ಮೈ ದುನುರೊ ಕರಿಲಾರೆ ಮಾರಾಯ

ಜೋಡೀನ ವಾಲೆ ಬರಿಯೊಂದು

ಚಿಕ್ರಾನೆ ಶಿವನೇಯೊ ಚಿಕ್ಕಳ್ಳಿ ಮರದಡಿಯ

ಏಳೂರು ಮಾನ್ಯವಿಗೆ ಸದುರಾದೊ ಬರುದಾರಲ್ಲೇ

ತಿಮ್ಮಣ್ಣ ಗ್ವಾಲೆ ಬರುದಾನೆ

ರಾಯ ಶಿವನೇಯೊ ಜೋಡಾಲದ ಮರದಡಿಯ

ಸುತ್ತಲ ಮಾನ್ಯವ್‌ರಿಗೆ ಸದುರಾಗಿ ಬರುದಾರ

ತಿಮ್ಮಣ್ಣ ಗ್ವಾಲೆ ಬರುದಾರೆ

ಜೋಡೀನ ವಾಲೇ ಬರುದಾನೆ ನಿಂಗಣ್ಣ

ವಾಲೇಯ ಆಗ ಕಳುವ್ಯಾನೆ

ನಿತ್ತುದ ಕೋಲುಕಾರುನ ಕರಿಷ್ಠಾನೆ ನಿಂಗಣ್ಣ

ವಾಲೇಯ ಆಗ ಕಳುವ್ಯಾನೆ

ಜೋಡೀನ ವಾಲೇ ತಕ್ಕೊಂಡು ಕೋಲುಕಾರ

ತಿಮ್ಮಣ್ಣ ಗ್ವಾಲೆ ಕೊಡುತ್ತಾನೆ

ಕೊಟ್ಟಂತ ವಾಲೆಯೋ ಇಸಗಂಡು ತಿಮ್ಮಣ್ಣ

ವಾಲೇಯ ವಡುದು ಓದಿಕ್ಯಂಡು-ತಿಮ್ಮಣ್ಣ

ಸುಂಗಾರವಾದ ಮುಗುಳ್ಳಾಗೆ

ಸುಂಗಾರವಾದೋ ಮುಗುಳ್ಳಾಗೆ ತಿಮ್ಮಣ್ಣ

ಏಳೂರ ಮಾನ್ಯವೇ ಬರುತ್ತಾರೆ

ಕರಿ ಎಲಿಯ ಕಾಮ ಬಾರೋ ಗೋಷಯ್ಯ

ಎಳಿಯ ಹೊಂಬಾಳೆ ಬಾರೋ

ಅರಗೀದ ವಲದಾಗೆ ಬರಗೀನ ಕೂಳ್ಯಾಗೆ

ಬರಿಯ ರಾಜಣುದ ಬಯಲಾಗೆ-ಗೋಷಯನ

ಅಂದಲ ಸಾಲಿಟ್ಟೇ ಬರುತಾವೆ

ಅಂದಲ ಸಾಲಿಟ್ಟೇ ಬರುತಾವೆ ಗೋಷಯ್ಯ

ನಿಲ್ಲುದುಲೆ ಹೊಕ್ಕ ಶಿವನೀಗೆ

ಏಳೂರು ದೇವರ ಕಾಳಗ

ಬಂದ ತನ್ನಾಗೆ ಶರಣು ಸಂಪತ್ತಾಗಿ
ಬರತದು ಡೀರ್‍ಯೇವುದ ಒಳವೀಕೆ

ಹಳದಿ ಡೀರ್‍ಯೇವು ಹೊಡೆಸಿದ ನಿಂಗಣ್ಣ
ತಮ್ಮನೊಳವೀಕೆ ಕರುದಾನೆ.

ಹತ್ತೀಯ ಹೊಲದಾಗ ಭತ್ತಾದ ಕೂಳ್ಯಾಗೆ
ಚುಟ್ಟ ರಾಜಣದ ಬಯಲಾಗೆ-ಈರಕಾಮಯ್ಯನ
ಪಲ್ಲಕ್ಕಿ ಸಾಲಿಟ್ಟೇ ಬರುತಾವೆ

ಪಲ್ಲಕ್ಕಿ ಸಾಲಿಟ್ಟೇ ಬರುತಾವೀರಕಾಮಯ್ಯ
ನಿಲ್ಲುದಲೇ ಬಂದ ಶಿವನೀಗೆ,

ನಿಲ್ಲುದಲೇ ಬಂದ ವೀರಕಾಮಯ್ಯ
ಅವ್ರಣ್ಣಾ ತಮ್ಮೂರಿಗೆ ಶರಣಾರ್ಥಿ

ಬಂದಾ ತನ್ನಾಗೆ ಶರಣು ಸಂಪತ್ತಾಗಿ
ಬರತಮ ಡೀರವುದ ಒಳವೀಕೆ

ರಾಯ ಗಡೀಹಳ್ಳಿ ಹೊಂಡಾದೇರಿಮ್ಯಾಲೆ
ತಂಬುಟದ ಹುಂಡೆ ನೆಲಬೋರೆ ತಗುದಂಗೆ
ಈರಾ ಬಸವಣ್ಣ ಹೊರಟಾನೆ

ಒಕ್ಕಾಳ ಹುರಿಗೆಜ್ಜೆ ಒಕ್ಕಾಳ ಕಿರಿಗೆಜ್ಜೆ

ಚೊಕ್ಕ ಚೆನ್ನುದಲೇ ಮಕರಂಭ-ಗಡೀಹಳ್ಳಿ

ಚನ್ನಾ ಬಸವಣ್ಣ ಬರುತ್ತಾನೆ

ನಾಗಾಳ ಹುರಿಗೆಜ್ಜೆ ನಾಗಾಳ ಕಿರಿಗೆಜ್ಜೆ

ನಾಗಾಭರಣದ ಹಣೆಹಗ್ಗ-ತಡುಗಾದ

ಹುಚ್ಚೂರು ಬಸವಣ್ಣ ಬರುತ್ತಾನೆ

ಹುಟ್ಟೂರು ಬಸವಣ್ಣ ಬರುತಾನವನೀಪಾರು

ನಿಲ್ಲುದಲೆ ಹೊಕ್ಕು ಶಿವನೀಗೆ

ಏಳೂರು ದೇವರ ಕಾಳಗ

ಬಂದ ತನ್ನುರಿಗೆ ಶರಣು ಸಂಪತ್ತಾಗಿ

ಬರತಮ ಡೀರೇವುದ ಒಳವಿಕೆ

ಪಟ್ಟೆ ಡೀವು ಹೊಡಸೀದ ನಿಂಗಣ್ಣ

ಕತ್ತೀಲಿ ಪಾರ ಹಿಡಿಸ್ಯಾನೆ

ಕಂಸಾಗರದಯ್ಯೋ ಬರುತಾನೆ ಆಗಿನ್ನು

ನಿಲ್ಲುದಲೆ ಬಂದ ಶಿವನೀಗೆ

ಬಂದ ತನ್ನಾಗೆ ಶರಣು ಸಂಪತ್ತಾಗಿ

ಬರತಮ ಡೀರ್‍ಯೇವುದ ಒಳವೀಕೆ

ಏಳೂರ ತಮ್ಮುಗಳೆ ಎಲ್ಲೋರು ಬಂದಾರೆ

ಮುಗಳೀಯ ತಮ್ಮಾ ಬರಲಿಲ್ಲ

ಜತ್ತೀನ ಸಂಕು ವುಲಿಸಿ ಹಿಡಿಯೋನೆ

ಕರಡೆ ವಾದ್ಯವುಕೆ ಮರುಗೋನೆ ಮುಗಳೀಯ

ಈರದಿಮ್ಮಣ್ಣ ಬರಲಿ

ಜೋಡೀನ ಸಂಕು ವಾವುಲಿಸಿ ಹಿಡಿಯೋನೆ

ಈರ ವಾದ್ಯವುಕೆ ಮರುಗೋನೆ-ಮುಗಳೀಯ

ಈರ ದಿಮ್ಮಣ್ಣೊ ಬರಲಿಲ್ಲೊ

ಈರದಿಮ್ಮಣ್ಣೆ ಬರಲಿಲ್ಲ ಅಂತೇಳಿ

ಶಿವನೇ ನಿಂಗಣ್ಣೋ ನುಡುದಾನೆ

ನೀರಗಾಡೋದು ಎಡೆಗೆರಾಜಣದಕ್ಕಿ

ಹಿಡುದನ್ ನನ್ನರಸೋ ದಳವಾಯಿ ತಿಮ್ಮಣ್ಣಾಗೆ

ಬೋಮನದಿಳ್ಳೇವು ಕೊಡಿರಯ್ಯೋ

ನೀರಗಾಡೋದು ಸಿದ್ಧ ನೀಲದ ಕುದುರೇಯ

ಕರೆದು ಮಯ್ ತೊಳದೆ ಕುರತಿಟ್ಟು-ತಿಮ್ಮಣ್ಣ

ಅಪ್ಪುನ ಕಾಳುಕ್ಕೆ ನಡಿಯೆಂದ

ಕಟ್ಟ್ಯಾಗಾಡೋದೆ ಸಿದ್ದು ನೀಲದ ಕುದುರೆಯ

ಉಜ್ಜಿ ಮಯ್ ತೊಳದೆ ಕುರತಿಟ್ಟು-ತಿಮ್ಮಣ್ಣ

ತಂದೆ ಕಾಳುಕ್ಕೆ ನಡಿಯೆಂದ

ಅಂಗಿಯಿಟ್ಟೈದಾನೆ ಸುಂಗಾಸುತ್ತೈದಾನೆ

ಸುಂಗಾಬಿಟ್ವಾನೆ ನವಲಂಗ

ಹಾಲಾಕುಡಿಯೋರೆ ಲೋಲಾಟ ಆಡೋರೆ

ಬಾರಾಗಿ ನುಡಿಯೋ ನುಡಿಸೋರೆ-ಅಂಬಾರಳ್ಳಿ

ಯೇಗಿ ಸಿದ್ದಯ್ಯೋ ಬರುತಾರೆ

ಬಂಗೀಯ ಸೇದೋರೆ ಬಿಂಗ್ಯಾಟ ಆಡೋರೆ

ರುದ್ರಾಗಿ ನುಡಿಯೋ ನುಡಿಸೋರೆ-ಅಂಬಾರಳ್ಳಿ

ಜಂಗಮ ಸಿದ್ದಯ್ಯೋ ಬರುತಾರೆ

ಬೆಳ್ಳೀಯ ದೀವುಟಿಕೆ ಬಿಲ್ಲೊಂದು ಸಾವೂರ

ಗಲ್ಲುಗಲ್ಲೆಂಬೋ ಹುರಿಗೆಜ್ಜೆ -ಗೊರನಾಕಲ್ಲ

ವಲ್ಲಬ ಸಿದ್ದಯ್ಯೋ ಬರುತಾರೆ

ಬಂದಂತ ತಮ್ಮರಿಗೆ ಶರಣು ಸಂಪತ್ತಾಗಿ

ಬರಿತಮ ಡೀರ್‍ಯೆವುದ ಒಳವೀಕೆ

ಏಳೂರ ಮಾನ್ಯವುರೇ ಶಿವನೇಯ ವುರಮುಂದೆ

ಶಿವನೇ ವುರಮುಂದೆ ಬರುತ್ತಾರೆ

ಬಡಗ್ಣಿಂದ ಬಂದೆವಪ್ಪೋ ಎಂಬತು ಬಾಣಾದೇರು

ಸ್ವಾಮಿ ನಿಂಗಣ್ಣೋ ಬೆಲಿಮಾಡಿಕೊಂಡಾನಲ್ಲೆ

ಕಾಳುಗುತಕ್ಕಾದೋ ದವುನಾವೊ

ತೆಂಕಲಿಂದ ಬಂದೇವಪ್ಪೊ ನಲವತ್ತು ಬಾಣಾದೇರು

ಸ್ವಾಮಿ ತಿಮ್ಮಣ್ಣೋ ಬೆಲಿಮಾಡಿಕೊಂಡಾನಲ್ಲೆ

ಅವ್ರಾಯುದಕೆ ತಕ್ಕಾದೊ ದವುನಾವೊ

ಹತ್ತೀಯ ಮರದಡಿಯೊ ಇಟ್ಟಾರೆ ಕುಲುಮೇಯ

ಹತ್ತಿ ತಲ್ಲಣಿಸಿ ನಡುಗ್ಯಾವೆ-ಗೋಷಯ್ಯಾನ

ಕಟ್ಟಲಗು ಸಾಣಿ ಹಿಡುದಾವೆ

ಏಳೂರು ದೇವರ ಕಾಳಗ

ಆಲಾದ ಮರದಡಿಯೋ ಹೂಡ್ಯಾರೆ ಕುಲುಮೇಯ

ಆಲು ತಲ್ಲಣಿಸಿ ನಡುಗ್ಯಾವೆ-ಈರಕಾಮಯ್ಯಾನ

ಜೋಡಲಗು ಸಾಣಿ ಹಿಡುದಾವೆ

ನಿಂಬೆಯ ಮರದಡಿಯೋ ಹಣ್ಣಾರೆ ಕುಲುಮೇಯ

ನಿಂಬೆ ತಲ್ಲಣಿಸಿ ನಡುಗ್ಯಾವೆ-ನಿಂಗಣ್ಣಾನ

ಜೋಡಲಗು ಸಾಣಿ ಹಿಡುದಾವೆ

ಅಳ್ಳಿಯ ಮರದಡಿಯೋ ಹಣ್ಣಾರೆ ಕುಲುಮೇಯ

ಅಳ್ಳಿ ತಲ್ಲಣಿಸಿ ನಡುಗ್ಯಾವೆ-ಮುಗುಳಿ ತಿಮ್ಮಣ್ಣಾನ

ಕಟ್ಟಲಗು ಸಾಣಿ ಹಿಡುದಾವೆ

ಅವ್ರವ್ರ ಕಯ ಸಾಣೀಯ ಹಿಡಿಸ್ಯಾರೆ

ಏನೊಂದೆ ಅಷ್ಟೇ ನುಡುದಾರೆ

ಏಸೋಸು ಸಾಮ್ರಾವು ಏಸೋಸು ಲಕ್ಷಾವು

ಯಾರಾರಿಗೇ ನೀವು ಇರಬ್ರಯ್ಯೋ

ಕತ್ತೀ ಕಿತ್ತಾನೆ ಕಲಮ್ಯಾಲೆ ಇಟ್ಟಾನೆ

ನೆತ್ತಿಯ ಜುಂಜೋ ವದುರಾವೆ-ಗೋಷಯ್ಯ

ಇಪ್ಪತ್ತೆ ಸಾವ್ರೊ ಇರಲ್ರಯ್ಯೋ

ಕಂಡೇವ ಕಿತ್ತಾನೆ ಬಂಡೇ ಮ್ಯಾಲಿಟ್ಟಾನೆ

ಮಂಡೇಯ ಜುಂಜೋ ವದುರಾವೆ-ಮುಗಳೀ ತಿಮ್ಮಣ್ಣ

ಮಿಕ್ಕಿ ಮೀರಿದ್ದೇ ನಮಗಿರಲಿ

ಮಿಕ್ಕಿ ಮೀರಿದ್ದೆ ನಮಗಿರಲಿ ಅಂತೇಳಿ

ಈರ ದಿಮ್ಮಣ್ಣೋ ನುಡುದಾನೆ

ಏಳೂರು ಮಾನ್ಯವುರೊ ಕರಕಂಡು ನಿಂಗಣ್ಣ

ಅರಮನಿಗೆ ಆಗ ಬರುತ್ತಾನೆ

ಹೆತ್ತವ್ವ ಕಾಮಾಲೆ ಒತ್ತೀಲಿ ಸುಣ್ಣಾ ತಾರೆ

ಮುಂದಾಲ ಗರತಿ ಬಳಿಬಾರೆ-ನಮ್ಮವ್ವ

ಜೋಡೀನ ತಮ್ಮೊರೆ ಬರುತ್ತಾರೆ

ಹಡೆದವ್ವ ಕಾಮಾಲೆ ನೀರು ಸುಣ್ಣಾ ತಾರೆ

ದಾರುವಂದಾವ ಬಳಿಬಾರೆ-ನಮ್ಮವ್ವ

ಏಳೂರು ಮಾನ್ಯವರೇ ಬರುತ್ತಾರೆ

ಏಳೂರು ಮಾನ್ಯವುರೇ ಅರಮನಿಗೆ ಬಂದಾರೆ

ಬಾಲಾ ನಿಂಗಣ್ಣೊ ನುಡುದಾನೆ

ಹೆತ್ತವ್ವ ಕಾಮಾಲೆ ಇತಕೇಳೆ ನನಮಾತ

ಗಾಡಾನೊಂದಡಿಗೆ ದುಡುಮವ್ವೋ

ಏಳೂರು ಮಾನ್ಯವುದೇ ಅತ್ತಾರೆ ನಮ್ಮನ್ನ

ಗಾಡಾನೊಂದಡಿಗೆ ದುಡುಮವ್ವೋ

ದೇವಾರ ಗುಡಿಯಾಗೆ ದೇವಂಗದ ಕಲ್ಲಳ್ಳು

ಬಾರೀಯ ವನಕೆ ಬಲಗೈಲಿ-ಕಾಮವ್ವ

ಆಡುತ್ಯಾಲಕ್ಕಿ ತುಳುಸ್ಯಾಳೆ

ಆಡುತ್ಯಾಲಕ್ಕಿ ತುಳುಸ್ಯಾಳೆ ಕಾಮವ್ವ

ಯಾವ ಮಾನ್ಯವ್ರಿಗೆ ಅವತೋಳ

ಯಾವ ಮಾನ್ಯವ್ರಿಗಂದ್ರೆ ಏನ ಹೇಳಲಿ ಸ್ವಾಮಿ

ಲಕ್ಸಾಕೆ ಕೊಂಡು ಎಳಗಾನೆ ಮ್ಯಾಲೇ ಬರೊ

ಈರದಿಮ್ಮಣ್ಣಗೆ ಅವತೋಳ

ನಿಂಗಣ್ಣ ನ ಗುಡಿಯಾಗೆ ನಿಂದಕ್ಕೆ ತುಳುಸೋಳೆ

ಬಾಲರಾಜಣವೋ ತುಳುಸೋಳೆ-ಪಿಟ್ಟವ್ವ

ಎತ್ತಲ ಮಾನ್ಯವರಿಗೇ ಅವತೋಳ

ಯಾರಿಗೆ ಅಂದ್ರೆ ನಾನು ಏನ ಹೇಳಲಿ ಸ್ವಾಮಿ

ಲಕ್ಸಾಕೆ ಕೊಂಡು ಎಳಗಾನೆ ಮ್ಯಾಲಿರೊ

ಈರಕಾಮಯ್ಯಾಗೆ ಅವತೋಳ

ನಿಂಗಣ್ಣನ ಗುಡಿಯಾಗೆ ನಿಂದಕ್ಕೆ ತುಳುಸೋಳೆ

ಬಂದ್ರಲ್ಲೇ ನಿನ್ನ ತವರೋರು-ತೊಯ್ಯನ ಕುರುಬು

ನಿಂಬೆ ಹಣ್ಣಿಗಿಂತ ಚೆಲುವಾರೆ,

ಏಳೂರು ದೇವರ ಕಾಳಗ

ಬಾಳೆ ವನುದಾಗೆ ಬಾಲರಾಜಣವ ತುಳಿಸೋಳೆ
ನಕ್ಕರಲ್ಲೇ ನಿನ್ನ ತವರೋರು-ತೊಯ್ಯನ ಕುರುಬ್ರು
ಬಾಳೆ ಹಣ್ಣಿಗಿನ್ನ ಚಲುವಾರ

ಒಕ್ಕಾಳಕ್ಕೀಗೆ ಇಕ್ಕಾಳಾಲಾ ಹೊಯ್ದು
ತಪ್ಪಾನೊಂದಡಿಗೆ ದುಡುಮ್ಯಾರೆ
ನಾಗಾಳಕ್ಕೀಗೆ ಐಗೊಳಾಲಾ ಹೊಯ್ದು

ಗಾಡಾನೊಂದಡಿಗೆ ದುಡುಮ್ಯಾರೆ-ಕಾಮವ್ವ
ಸೊಸಿಯೇ ಪಿಟ್ಟವ್ವಗೆ ಹೇಳುತ್ತಾಳೆ
ಏಳೂರು ಮಾನ್ಯವ್‌ರಿಗೆ ಚೆನ್ನಾದ ಗಿಂಡ್ಯಾಗೆ

ಪನ್ನೀರ  ದಾರೆ ಕೊಡುಬಾರೆ
ಚೆನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು
ರಾಯಾರ್‍ಬ್ಯಾಲ್ಯವುಕೇ ನೆರುದಾಳೆ

ಚೆನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು
ಗಂಡನ ಮುಂದಾಕೆ ಇಡುತ್ತಾಳೆ
ಏಳೂರ ತಮ್ಮುರ ಬಿಟ್ಟು ನನಿಗೇ ಕೊಟ್ಟಾಳೆಂದು

ಆಗ ನಿಂಗಣ್ಣೋ ನುಡುದಾನೆ

ಜೋಡೀನ ತಮ್ಮುರ ಬಿಟ್ಟು ನನಿಗೇ ಕೊಟ್ಟಾಳೆಂದು

ಮುತ್ತಿನ ಕ್ವಾಲ್ದೆಗಳ ಹಿಡುದೆದ್ದ ಪಿಟ್ಟ ರಸಿ

ಅವ್ರತ್ತೆಯ ಹೋಗಿ ಮರಿಬಿದ್ದೂ

ಆಗ ಅರಿಯದೋಳು ಈಗ ತಿಳಿಯದೋಳು

ಏನೇನೂ ಅರಿಯೋ ನನಾಸ್ವಾಸೆರ-ನಿಂಗಣ್ಣ

ನಿನ್ನ ಕ್ವಾಲ್ದೇಯ ಕಯ್ಯ ಮುದುರಪ್ಪ

ಹಿಂದೆ ಅರಿಯದೋಳು ಮುಂದೆ ತಿಳಿಯದೋಳು

ಏನೇನೂ ಅರಿಯೋ ನನಸ್ವಾಸೆ-ನಿಂಗಾಪ್ಪ

ನಿನ್ನ ಕ್ವಾಲ್ದೇಯ ಕಯ್ಯ ಮುದುರಪ್ಪೋ

ನಿನ್ನ ಕ್ವಾಲ್ದೇಯ ಕಯ್ಯ ಮುದುರಪ್ಪೋ ಅಂತೇಳಿ

ಕಾಮವ್ವ ಆಗ ನುಡುದಾಳೆ

ಚೆನ್ನಾದ ಗಿಂಡ್ಯಾಗೆ ಪನ್ನೀರ ತಕ್ಕೊಂಡು

ಏಳೂರ ಮಾನ್ಯವ್‌ರಿಗೇ ಕೊಡುತ್ತಾಳೆ

ಅಂತ್ಯಗುಂಬೋರೇಳ್ರಿ ಪಂಕ್ತೆಗುಂಬೋರೇಳ್ರಿ

ಮಂತುರಿ ನಿಂಗಣುನ ಬಲಬೇರಿ ಉಂಬಂತ

ಈರ ಜಂಗಮರೇ ಅಡಿಗ್ಯಾತು

ಎಡದೀಲುಂಬೋರೇಳ್ರಿ  ಬಲದೀಲುಂಬೋರೇಳ್ರಿ

ಬಾಲಾನಿಂಗಣುನ ಬಲಬೇರಿ ಉಂಬಾಂತ

ಲಿಂಗಜಂಗಮರೇಳ್ರಿ ಅಡಿಗ್ಯಾತು

ಅಕ್ಕುಸ್ತ ಯಡಿಯಾತು ಪಣಿಗಂದ ಯಡಿಯಾತು

ಸಾಣೇಕಲ ಮ್ಯಾಲೆ ಯಡಿಯಾತು-ಏಳೂರ

ಈರ ಜಂಗಮರೇಳ್ರಿ ಅಡಿಗ್ಯಾತು

ಈರ ಜಂಗಮರೇಳ್ರಿ ಅಡಿಗ್ಯಾತು ಶಿವನೇಯ

ಕಾಮವ್ವ ನೀರ ಕೊಡುತಾಳೆ

ಏಳೂರ ಮಾನ್ಯವುರೇ ಉಟಾವ ಮಾಡ್ಯಾರೆ

ತಾಂಬೂಲ ಅವುರೇ ಹಾಕುತ್ತಾರೆ

ಚೆನ್ನಾದ ಗುಡಿಗೂಡಿ ಹೊನ್ನೀ ನೊಗೇಸೊಪ್ಪು

ನನ್ನಮ್ಮ ಬೆಂಕಿ ಕೊಡುಬಾರೆ-ಏಳೂರ

ತಮ್ಮಗಳೇ ಹೊಗೆಯ ಬಿಡುತ್ತಾರೆ

ಕಂಚೀನ ಗುಡಿಗೂಡಿ ಹೊನೊಗೇಸೊಪ್ಪು

ದೊಡ್ಡಮ್ಮ ಬೆಂಕಿ ಕೊಡುಬಾರೆ ಏಳೂರ

ಮಾನ್ಯವುದೇ ಹೊಗಿಯಾ ಬಿಡುತ್ತಾರೆ

ಪಟ್ಟಿಯ ಸೀರ್ಯಾಗೆ ಕಟ್ಟವ್ವ ಬುತ್ತೀಯ

ಇಪ್ಪಾತ್ತೆ ದಿನೋ ಅಳಸಾದಂತಾ-ಬುತ್ತೀಯ

ಹಣ್ಣ ವ್ಯಾನ್ವೇರಿ ಜಗಳಾಕೆ

ಹಣ್ಣಾವ್ವಾನ್ವೇರಿ ಜಗಳಾಕೆ ನಮ್ಮವ್ವ

ಗಡಿನಾಡಿಗು ನನ್ನ ಕಳಿಕೊಡೆ

ಏಳೂರು ದೇವರ ಕಾಳಗ

ನಿಂಬೇ ಹಣ್ಣಿನಂಗೆ ತುಂಬಿದ ಮಯ್ ನನಾಸ್ವಾಸೆ

ಕೆಂಜಾಡೆ ಬೆನ್ನೋ ವಲುವುತೊ-ನಿಂಗಪ್ಪ ನಿನ್ನ

ಮಡದಿಯ ನೋಡಿ ಉಳಿದೊರಿಯೆ

ಬಾಳೇಹಣ್ಣಿನಂಗೆ ಬಾಗಿದ ಮಯ್ ನನಾಸ್ವಾಸೆ

ಕಿರಿಜಾಡೆ ಬೆನ್ನೋ ವಲುವು ತೋ-ನಿಂಗಣ್ಣ

ನಾರೀಯ ನೋಡಿ ಉಳಿದೊರಿಯೆ

ನಾರಿಯೆಂಬುಳು ನನಗೆ ಹಡದಳ ಸಾಮಂದ

ರಾಯ ದೊಡ್ಡಪ್ಪನ ಜಲಮ್ಮುಂದೆ ಇದ್ದಾರೆ

ದುಬ್ಬಗೌಡೇರ ಬಲತರುವೆ

ಮಡುದಿಯೆಂಬಳು ನನಗೆ ಹಡದಳ ಸಾಮಂದ

ಸತ್ಯೋನ್ ದೊಡ್ಡಪುನ ಜಲಮುಂದೆ ಇದ್ದಾರೆ

ಮಳಗೌಡೇರ ಬಲತರುವೆ

ಮೂಳಗೌಡೇರ ಬಲತರುವೆ ನಮ್ಮವ್ವ

ಕಾಳುಕ್ಕೆ ನನ್ನ ಕಳಿಕೊಡೆ

ಎಟು ಹೇಳಿದುರೆ ಕೇಳುವಲ್ಲಿ ನಿಂಗಣ್ಣ

ಉಂಡೆಗು ಬಾರೋ ಎದಿಯಾಲು

ನಿನಯದಿಯಾಲ ಎಂಬೋವು ಮಾವೀನ ಕಾಯಲ್ಲಿ

ಮಾವೀನ ಕಾಯೇ ಇಸವಿಲ್ಲೆ ನಮ್ಮವ್ವ

ಮಾಳಿಗ್ಗೆ ಹೋಗಿ ಕರಿಹೋಗೆ

ಮಾಳಿಗ್ಗೆ ಹೋಗಿ ಕರಿಹೋಗೆ ನಮ್ಮವ್ವ

ಗಡಿನಾಡಿಗು ನನ್ನ ಕಳಿಕೊಡೆ

ಹೆಂಡಾರಿಲ್ಲದೋನೆ ಮಕ್ಕಳಿಲ್ಲದೋನೆ

ಹೆಂಡರಿಲ್ಲಾದಾ ಅಯಬೋಗಿ-ಮುಗಳಿ ತಿಮ್ಮಣ್ಣ

ಬಾಲಾನ ಬಿಟ್ಟೇ ನಡಿದೊರಿಯೆ

ಕತ್ತಿ ಹಿಡಿಯದರಿಯೋ ಸಾಣಿ ತಿರುವದರಿಯೋ

ಕಾಳುಗದ ಕಯ್ಯೋ ಮೊದಲರಿಯೋ-ತಿಮ್ಮಣ್ಣ

ಪುತ್ರಾನ ಬಿಟ್ಟೇ ನಡಿದೊರಿಯೆ

ಏಳೂರು ದೇವರ ಕಾಳಗ

ಹೆಂಡಾರಿಲ್ಲದೋನೆ ಮಕ್ಕಾಳಿಲ್ಲಾದೋನೆ . . .

ಮಡುದೇರಿಲ್ಲಾದ ಅಯಬೋಗಿ-ಮುಗುಳಿ ತಿಮ್ಮಣ್ಣ

ಕಂದಾನ ಬಿಟ್ಟೇ ನಡಿದೊರಿಯೆ

ಹತ್ತೆಂಟು ಬಾಣೋ ಸುತ್ತುಗಟ್ಟಿ ಬರುವಾಗ

ದಿಕ್ಕುದೆಸ್ಸಿ ಮಗನೆ ರಣದಾಗೆ

ಆರೇಳು ಬಾಣೋ ತೂರಾಡಿ ಬರುವಾಗ

ಎದೆಗೆಟ್ಟಿ ಮಗುನೆ ರಣುದಾಗೆ

ಹತ್ತೆಂಟು ಬಾಣೋ ಸುತಿಗಟ್ಟಿ, ಬರಲವ್ವ

ನನ ಬಟ್ಟೇಲಿ ಆರ ಹೊಡದೇನು ದೊಡ್ಡವ್ವ

ಬಲಕೆ ನಿಂಗಣುನ ಕಳಿಕೋಡೆ

ಆರೇಳು ಬಾಣೋ ತೂರ್‍ಯಾಡಿ ಬರಲವ್ವ

ರಮದೀಲಿ ಆರ ಹೊಡೆದೇನು ದೊಡ್ಡವ್ವ

ಬಲಕೆ ನಿಂಗಣುನ ಕಳಿಕೋಡೆ

ಬಲಕೆ ನಿಂಗಣುನ ಕಳಿಕೋಡೆ ಅಂತೇಳಿ

ದಂಡಿನ ದಳಪೋತಿ ನುಡುದಾನು

ಕರಿ ಎಲಿಯ ಕಾಮ ಬಾರೋ ನಿಂಗಣ್ಣ

ಎಳೆಯ ಹೊಂಬಾಳೆ ಬಾರೋ

ಸುಟ್ಟ ಸುಕ್ಕರವಾರೋ ಹುಟಿದೆಲ್ಲ ನಿಂಗಣ್ಣ

ಪಟ್ವಾಣವೆಲ್ಲ ಹೊನ್ನೊಕ್ಕಲೆ ನಿಂಗಣ್ಣ

ಪಟ್ಟಣಕಿನ್ನಾರ್ ವಡಿಕ್ಕಾರು

ಕಗ್ಗಾನಕೆ ಕಲಿಬೀರೋ ಲೆಗ್ಗೀಗೆ ಸುರತಾಳ

ಕಣ್ಣು ಟ್ಟಿತವ್ವ ಶಿವುನ್ಯಾಗೆ ಶಿವನೇ ನಿಂಗಣ್ಣ

ಒಬುತಾಯಿಗೊಬ್ಬ ಮಗನಂತೆ

ಒಬುತಾಯಿಗೊಬ್ಬ ಮಗನು ನಿಂಗಣ್ಣಾನು

ಗಡಿನಾಡ್ಯಾಳ್ಯಾಕೆ ಹೊರುಟಾನೆ-ಕಾಮವ್ವ

ಹಡದವ್ ಕಾಮಾಲೆ ಅಳುತಾಳೆ

ಹತ್ತುಂಬು ಹಿಡಿಮಗುನೆ ಮತ್ತಂಬು ಹಿಡಿಮಗುನೆ

ರಕ್ಕಸನ ಶಿರವ ಹರದಂಬೋ-ನಿಂಗಣ್ಣ ನಿನ್ನ ಪ್ಪಾನಲಗಂಬು ಹಿಡಿದೋಗೋ

ಆರಂಬು ಮೂರಂಬು ಮ್ಯಾಲೆ ಸಾವುರದಂಬು ರಾವುಣನ ಶಿರವ ಹರದಂಬು-ಮಲ್ಲೆಪ್ಪ ನಿಮ್ಮ ತಂದೆ ಹಲಗಂಬೊ ಹಿಡದೋಗೋ

ಆರು ತಿಂಗಳು ನಿದ್ರೆ ಆರು ತಿಂಗಾಳೆದ್ದು ವನಮಲ್ಲಿ ದೊರಿಗೆ ಸುಖನಿದ್ರೆ ಮಾಡುವಾಗ ಗಡಿನಾಡ್ಯಾ ಜ್ಞಾಕೆ ಹೊರುಟಾನೆ

ಬಡಗಲ ರಾಯರೋ ಸಡಗರೇನಾಳಾಲಿ ಜಾಜಿಯ ಹೂವೇ ತಲೆದಿಂಬ್-ಮಲ್ಲೀದೊರೆ ಸಂಪತ್ತಿನ ನಿದ್ರೆ ಕೆಡಸ್‌ನೆ

ತೆಂಕಾಲರಾಯರ ಸಂಪತ್ತೇನೇಳಾ ಸಂಪಿಗೆ ಹೂವೇ ತಲೆದಿಂಬ ಮಲ್ಲೀದೊರೆ ಸಂಪತ್ತಿನ ನಿದ್ರೆ ಕೆಡಿಸ್ಕೊನೆ

ಸಂಪತ್ತಿನ ನಿದ್ರೆ ಕಡಿಸ್ಕೊನು ಅಂತೇಳಿ ಶಿವನೆ ಕಾಮವ್ವಗೆ ನುಡುದಾನೆ

ಹಾಲಿನ ಕಟ್ಟೆಮ್ಯಾಲೆ ನೀರು ಕಟ್ಟೆ ಕಟ್ಟಿ

ಸಾಲೀಯ ಒಗಿಯೋ ಮಡಿವಾಳ ಶಿವನೇಯ

ಹಸುಲೆ ಮ್ಯಾಲೆ ಹರವಯ್ಯೋ

ಹಸುಲೆ ಮ್ಯಾಲೆ ಹರುವಂತ ಗಳಿಗೇಯ

ಸಾಣಿಕಲ ಮ್ಯಾಲೆ ಗಳಿಗ್ಯಾದೊ ಏಳೂರ ದೀರಂತರ ಕಾಸೆ ಬಿಗಿದೂಡೋ

ಕೆಸರಿನ ಕಟ್ಟೆ ಮ್ಯಾಲೆ ಮಸರಿನ ಕಟ್ಟೆ ಕಟ್ಟಿ ದಸುರೀಯ ಒಗಿಯೊ ಮುಡಿವಾಳ ಶಿವನೇಯ ಹಸುಲೇಯ ಮ್ಯಾಲೆ-ಹರವಯ್ಯೋ

೩೪

ಹಸುಲೇಯ ಮ್ಯಾಲೆ ಹರವ್ ದಂತ ಗಳಿಗೇಯ ಹಸೆಯ ಕಲಮ್ಯಾಲೆ ಗಳಿಗ್ಯಾದೊ-ಮುಗಳೀಯ ಈರಂತ ಕಾಸೆ ಬಿಗದೂಡೆ

ಹಳ್ಳಾದ ನೀರಿಗೆ ತೆಳ್ಳನ್ನ ಕಲ್ಲಿಗೆ

ಅರಿಯದ

ಜಲ್ಲೀಸಿ ಕಾಯೋ ಬಿಸಲಿಗೆ ಶಿವನೇ ನಿಂಗಣನ

ಜಲ್ಲೀ ನಾಣ್ಯಾವೈ ಮಡಿಯಾದೊ

ಹಳ್ಳಾದ ನೀರಿಗೆ ಬೆಳ್ಳನ್ನ ಕಲ್ಲಿಗೆ

ಜಲ್ಲೀಸಿ ಕಾಯೋ ಬಿಸಿಲಿಗೆ ಗೋಷಯ್ಯಾನ ಜಲ್ಲೀ ನಾಣ್ಯಾವ್ವ ಮಡಿಯಾದೊ

ಜಲ್ಲೀ ನಾಣ್ಯಾವ್ಯೆ ಮಡಿಯಾದ್ರೂ ಏಳೂರ ದೆಸೆವಂತರ ಕಾಸೆ ಬಿಗದುಡಿಕೊ

ಕಟ್ಟೆಯ ನೀರೀಗೆ ಬುಟ್ಟೋಂದು ಕಲ್ಲಿಗೆ

ಗಟ್ಟಿಸಿಕಾಯೋ ಬಿಸಿಲಿಗೆ ನಿಂಗಣನ ಬಣ್ಣಾದ ನಾಣ್ಯಾನ್ವೇ ಮಡಿಯಾದೊ

ಬಣ್ಣದ ನಾಣ್ಯಾವೇ ಮಡಿಯಾದೆ ಏಳೂರ

ದೆಸೆವಂತರ ಕಾಸೆ ಬಿಗದುಡಿರೋ

ಏಳೂ ಮಾನ್ಯ

ಗಡಿನಾಡಯಾಜ್ಞಾಕೆ

ಗಡಿನಾಡ್ಯಾಜ್ಞಾಕೆ ಹೊರುಟಾರೆ ಅವರನ್ನು ಅವರಾನೆ ಕುದುರೆಯಾ ಹಿಡುದಾರೆ

ಆನೇಯ ಹಿಡಿರಯ್ಯೋ ಮದಸೊಂಕಿದಾನೇಯ

ತರಿಯ ಕಲ್ಲಾಗೆ ಮಣಿಯೋದೆ

ಆನೆ ನಡಸೂತ ನಿಂಗಣ್ಣ

ತಾನೇ ಮಾತಾಡೋ

ಕುದುರೆ ಕುಣುಸೂತೋ ನಿಂಗಣ್ಣ ನಿಂತೇ ಮಾತಾಡೋ

ಒಂಟಿ ಕುಣುಸುತೋ ನಿಂಗಣ್ಣ ನಿಂತೇ ಮಾತಾಡೋ

ಏಳೂರು ದೇವರ ಕಾಳಗ

ಏಳೂರು ದೇವರ ಕಾಳಗ

ಕೊಪ್ಪರಿಗೆಗಾಡೋದೆ ಹುರುಳೀಯ ಮೆಯ್ಯೋದೆ ಕಾಳುಕ್ಕೆ ಕಾಲ ಕೆದರೋದೆ ಶಿವನೇಯ ಧೀರನ್ನ ಕಾಳುಕ್ಕೆ ಹಿಡಿರಯ್ಯೋ

ಕುದುರೆಯ ಹಿಡಿರಯ್ಯೋ ಮದಸೋಂಕಿದ ಕುದುರೆಯ ಕೋಡಗಲ್ಲಾಗೆ ಕುಣಿಯೋದೆ ಮಂಗಳೀಯ ಧೀರನ್ನ ಕಾಳುಕ್ಕೆ ಹಿಡಿರ

ಒಂಟಿ ಹಿಡಿರಯ್ಯೋ

* ಮದಸೋಂಕಿದೊಂಟೇಯ

ತರಿಯಗಲ್ಲಾಗೆ ಕುಣಿಯೋದೆ-ಅನ್ನೇನಳ್ಳಿ ಬಂಟನ್ನ ಕಾಳಂಕೆ ಹಿಡಿರಯ್ಯೋ

ಬಂಟನ್ನ ಕಾಳುಕ್ಕೆ ಹಿಡಿರಯ್ಯ ಗೋಷಯ್ಯ

ಬಂಟನ್ನ ಕಾಳುಕ್ಕೆ ಹಿಡಿರಯ್ಯೋ

d

ಅವರಾನೆ ಕುದುರೆಗಳೊ ಹಿಡುದಾರೆ ಅವರೀಗ ಗಡಿನಾಡ್ಯಾಜ್ಞಾಕ್ಕೆ ಹೊರುವಾರೆ

ಗೆಜ್ಜೆ ಗಿಲಿಗಿಲಿಯೋ ಏಳೂರ

ಮದ್ದಾಲಿ ದಿಮಿದಿಮಿಯೋ

ಶಿವನೇಯ ಬಿಟ್ಟು ಹೊರಟು ಹೋಗುವಾಗ

ದಾನ ದರ್ಮಾನ ಕೊಡುತಾರೆ

ಹಯ ಮರದಡಿಯೋ ಮುತ್ತಿನ ರಾಶಿಮಾಡಿ ಮುತ್ತ ತಿದ್ದಿಸಿದ ಪ್ರಜೆಗೆಲ್ಲಾ ತಾಳೀಕಟ್ಟೆ ನಮ್ಮ ತಂದಿಗೆಲ್ಲಂಟ ಬಗದೀರಿ

ನನ ತಂದಿಗೆಲ್ಲಂಟ ಬಗದೀರಿ ಅಂತೇಳಿ

ದಂಡಿನ ದಳಪೋತಿ ನುಡುದಾನೆ

ಆಳಾದ ಮರದಡಿಯೋ ಹವಳದ ರಾಶಿಮಾಡಿ

ಹವಳ ತಿದ್ದಿಸಿದ ಪ್ರಜೆಗೆಲ್ಲಾ ತಾಳೀಕಟ್ಟೆ ನಮ್ಮ ದೊಡ್ಡಪ್ಪ ಲ್ಲಂಟು ಬಗದೀರಿ

ನಮ್ಮ ದೊಡ್ಡಪ್ಪಗಳೆಂಟು ಬಗದೀರಿ ಅಂತೇಳಿ ಏಳೂರ ಮಾನವರೇ ನುಡುದಾರೆ

ಅಳ್ಳಿಯ ಮರದಡಿಯೋ ಹೊನ್ನರಾಶಿ ಮಾಡಿ ಹೊನ್ನು ತಿದ್ದಿಸಿದ ಪ್ರಜೆಗೆಲ್ಲಾ ತಾಳೀಕಟ್ಟೆ ನಮ್ಮಪ್ಪಯ್ಯಲೆಂಟು ಬಗದೀರಿ

Co

ನಮ್ಮಪ್ಪಗ್ಯಲೆಂಟು ಬಗದೀರಿ ಅಂತೇಳಿ ಶಿವುನೆ ನಿಂಗಣ್ಣ ನುಡುದಾನೆ

ಏಳೂರು ದೇವರ ಕಾಳಗ

Globeber

ಹೋಗುವೇ ನನಮಗುನೇ ನೀನಾದರೋಗುತೀಯ

ನಿಮ್ಮಪ್ಪಾಗೆ

ಗೊಂದು ಮಾತ ತಿಳಿಸೋಗೋ

ಏನ ಹೇಳಿದುರೆ ಕೇಳವೊಲ್ಲೆ ನಿಂಗಣ್ಣ

ನಿಮ ತಂದಿಗೊಂದ ಮಾತ ತಿಳಿಸ್ಕೋಗೋ ಅಂತೇಳಿ ಶಿವನೇ ಕಾಮವ್ವ ನುಡುದಾಳೆ

ಮುಂಗೈಯಳ ಸರಪೂಣಿ ಉಂಬಾಗ ತಗಿವೋನೆ ಹಿಂದಲ ಮಾನ್ಯವುರೆ ತೊಲಗೋನೆ-ಶಿವನೇ ನಿಂಗಣ್ಣ ಅವ್ರಪ್ಪನ ಕಮ್ ಒಯ್ದು ನಗುತಿದ್ದ

ಮುಂಗೈಯಳ ಸರಪೂಣಿ ಯಾವಾಗ ತಗಿವೋನೆ ಯಾವ ಮಾನ್ಯವುರೆ ತೊಲಗೋನೆ-ಶಿವನೇ ನಿಂಗಣ್ಣ ಅವನಂದ ಕಟ್ ಒಟ್ಟು ನಗುತೆದ್ದ

ಏಳೂರ ಮಾನ್ಯವುರೇ ಶಿವನೇಯ ಬಿಟ್ವಾರು ಹೆಬ್ಬಾಗಲಾಗೆ ಬರುತಾರೆ

ಅವರತ್ತವ್ವ ಕಾಮಾಲೆ ಮತ್ತೇನೇಳುತ್ತಾಳೆ ಗಿಳಿಯ ಹಿಂಡುಗಳ ಕಳುವಾಳೆ.

ಏಗಿಳಿಯೇಗಿಳಿಯೇ ಏಗಿಳಿಯೇಗಿಳಿಯೇ ಹೋಗಿ ನಿಂಗಣುನ ತಡಿಹೋಗ್ರಿ

`ಹತ್ತು ಸಾವುರ ಗಿಳಿ ತಪ್ಪ ಕಟ್ಟಿದಂಗೆ

ಬಂದು ನಿಂಗಣುನ ತಡುದಾವೊ

ಆರು ಸಾವುರ ಗಿಳಿ ಲಾವಳ ಕಟ್ಟಿದಂಗೆ ಮತ್ತೆ ನಿಂಗಣುನೋ ತಡುದಾವೊ

ಏಳೂರು ದೇವರ ಕಾಳಗ

ಹಾಲು ಬಾನಾನುಂಡು ನಲವತ್ತಿದ್ದೇವ್ ಮೆದ್ದು ನನ್ನ ಮಾಳಿಗೆ ಒಳಗೆ ಮಡಗೀರೆ-ಆನಾವೇರಿ ಕಾಳುಕ್ಕೆ ಹೋಗಿ ಬರಾತೀನಿ

ತುಪ್ಪಾ ಬಾನಾನುಂಡು ಇಪ್ಪತ್ತಿನ್ ಮೆದ್ದು ನನ್ನುಪ್ಪರಿಗೆ ಒಳಗೇ ಮಡಗೀರೆ-ಆನಾವೇರಿ ಜಗಳಾಕೆ ಹೋಗಿ ಬರಾತೀನಿ

ಮಾತಿನವೆರಡು ಗಿಳಿಯ ಕರಕಂಡು ನಿಂಗಣ್ಣ ಗಿಣಿ ಹಿಂಡಿಂದಾಕೆ ಕಳುವಾನೆ-ನಿಂಗಣ್ಣ ಹೊರಟನಾನ್ವೇರಿ ಜಗಳಾಕೆ

ಹೆತ್ತವ್ವ ಕಾಮಾಲೆ ಮತ್ತಿಂಗೆ ಬಂದಾಳು ಕಂದಾನ ಕಯ್ಯ ಹಿಡುದಾಳೆ

ನಿಂಬೆ ಹಣ್ಣಿನಂತ ಕಂದನ ಕೈ ಹಿಡಕಂಡು ಏಳೂರ ಮಾನ್ಯವ್ರಿಗೆ ಶರಣಾರ್ಥಿ-ನಿಂಗಣ್ಣ ನಿನ್ನ ಕಾಳುಗದ ಕಯ್ದೆ ಜಯಾಜಯೋ

ಬಾಳೇ ಹಣ್ಣಿನಂತ ಬಾಲನ ಕಯ್ ಹಿಡಕಂಡು ಸುತ್ತುಲು ಮಾನ್ಯವ್ರಿಗೇ ಶರಣಾರ್ಥಿ-ನಿಂಗಣ್ಣ ನಿನ್ನ ಕಂಡ್ಯವುದ ಕಯ್ದೆ ಜಯಾಜಯೋ

ನಿನ್ನ ಕಂಡ್ಯವುದ ಕಯ್ದೆ ಜಯ ಜಯ ಅಂತೇಳಿ ಹಡದವ್ವ ಕಾಮಾಲೆ ನುಡುದಾಳೋ

ಶಿವುನೆಯ ಹೆಬ್ಬಗುಲ ಬಿಟ್ವಾರೆ ಅವರೀಗ ಶಿವುನೇಯ ಬಿಟ್ಟೇ ಹೊರುಬಾರು

♡

ಕಯ ಕಿತ್ತಾನು ಕಲಮ್ಯಾಲೆ ಇಟ್ವಾನು ನೆತ್ತಿಯ ಜುಂಜೋ ವದುರಾದೆ-ಮುಗಳಿ ತಿಮ್ಮಣ್ಣ ನಿಮ್ಮ್ ಹೆಂಡಾರ ಮ್ಯಾಲೆ ಅನುಕಂದೆ

ನಿಮ್ ಮಡುದಿ ಮಕ್ಕಳ ಮ್ಯಾಲೆ ಅನುಕಂದೆ ಇದ್ದಾರೆ ನಿಮ್ ಕುದುರೆ ಹಿಂದಾಕೆ ತಿರಾವ್ರಯ್ಯ-ಅಂತೇಳಿ ದಂಡಿನ ದಳಪೋತಿ ನುಡುದಾನೆ

೪೧

ಕಾಳೆ ಹಿಡುದಾವೊ ಕಂಚಿನ ಬೇರಿ ಬಡುದಾವೋ

ಸಿದ್ದ ಬೀರನ ಕಣಿವೇಗೆ ಎದ್ದವ್ ಬಾರೆ ಮ್ಯಾಗೆ ದಬ್ಬನ್ನ ದೋಣ ಬಡಿಸ್ಯಾರೆ ತಾಳೀಕಟ್ಟೆ ಹಡವದ್ವ ತಾಯಿ ಬದುರಾಳೆ

ಹಡದವ್ವ ತಾಯಿ ಬದುರಾಳೆ ಬಾಳಲ ಕಣಿವೆ ವಾರೀಲಿ ದಂಡ ತಿರುವ್ರಯೋ-ಅಂತೇಳಿ ದಂಡಿನ ದಳಪೋತಿ ನುಡುದಾನೆ

ಸಾತೆ ಕಲ್ಲಿನ ಮ್ಯಾಲೆ ಜ್ಯೋತಿ ದಂಡಿಳುದಂಗೆ ಏಳೂರ ಮಾನ್ಯವ್‌ರೇ ಇಳುದಾರೆ ತಾಳೀಕಟ್ಟಿ ಹಡದವ್ವ ತಾಯಿ ಬ್ಯ ದುರಾಳೆ

et

ಏಳೂ ಮಾನ್ಯವ್‌ರೇ ದಂಡಾಗಿ ಹೋಗುವಾಗ ಏನಂದೆ ಆಗ ನುಡುದಾರೆ

ಅಣ್ಣ ತಮ್ಮರಿಗೆ ಒಮ್ಮಕ್ಕದ ಪಲ್ಲಕ್ಕಿ ಮಾತಾಡಿ ಕಣಿವೆ ಇಳುದಾರೆ-ಆನಾವೇರಿ

ಹೊಟ್ಟೆಳ ಪಿಂಡಂಡ ನಡುಗ್ಯಾವೆ

ಏಳೂರು ದೇವರ ಕಾಳಗ

ಹಿರಿಯೋನೆ ನಿಂಗಣೋ

ಕಿರಿಯೋನೆ ತಿಮ್ಮಣ್ಣ

ಇಬುರೊಂದೇ ಕಣಿವೆ ಇಳುದಾರೆ-ಆನಾವೇರಿ

ನಡುದಾಡೊ ಪಿಂಡೋ ನಡಿಗ್ಯಾವೆ

ಹಿರಿಬೂಲಿ ನಿಂಗಷ್ಟೇ

ಕಿರುಬಲಿ ತಿಮ್ಮಣ್

ಮಾತಾಡಿ ಕಣಿವೆ ಇಳುದಾರೆ-ಆನಾವೇರಿ

ಅವರೊಟ್ಟೆಳ ಪಿಂಡೋ ನಡುಗ್ಯಾವೆ

ಜಲಕಲ ಮಲ್ಲೀ ಮ್ಯಾಲೆ ದುಮುಕಿ ದಂಡಿಳುದಂಗೆ

ಏಳೂರ ಮಾನ್ಯವ್‌ರೇ ದುಮುಕ್ಯಾರೆ-ಆಗಿನ್ನು ಬುತ್ತೀಯ ಆಗ ಉಗುಚ್ಚಾರೆ

ಹೆತ್ತಮ್ಮ ಕಟ್ಟಿದೊ ತುಪ್ಪಾದ ಬುತ್ತೀಯ ಏಳೂರ ಮಾನ್ಯವುರೇ ಉಣುತ್ತಾರೆ

ಏಳೂರು ದೇವರ ಕಾಳಗ

ದೊಡ್ಡವ್ವ ಕಟ್ಟಿದ ಆಲಾಗರದ ಬುತ್ತೀಯ ಸುತ್ತಲ ಮಾನ್ಯವರೇ ಉಣುತ್ತಾರೆ

ಏಳೂರ ಮಾನ್ಯ

ಬುತ್ತೀಯ ಉದ್ಕಾಗ

ಮತ್ತೊಬ್ಬ ತಮ್ಮ ಇಲವಂತೆ-ಗಡಿಹಳ್ಳಿ

ಈರಬಸವಣ್ಯ ಇಲವಂತೆ

ಹಾಲಾಗರದ ಬುತ್ತೀಯ ಉಟಾವ ಮಾಡುವಾಗ, ಮತ್ತೊಬ್ಬ ತಮ್ಮ ಇಲವಂತೆ-ಗಡಿಹಳ್ಳಿ ಈರ ಬಸವಣ್ಣ ಇಲವಂತೆ

೨3

ಈರ ಬಸವಣ್ಣೆ

ಈ ಇಲವಂತೆ ಶಿವನೇಯ

ಬಾಲಾ ನಿಂಗಣ್ಣ

ನೋಡುತ್ತಾನೆ

ರಾಯ ಶಿವನೇಯೋ ಹೊಂಡಾಡಾದೇರೀ ಮ್ಯಾಲೆ ಗಲ್ಲ ಗಲ್ಲೆಂಬೋ ಹುಲಿಗೆಜ್ಜೆ-ಗಡಿಹಳ್ಳಿ ಈರ ಬಸವಣ್ಣೆ ಬರುತಾನೆ

ಕಾಲೀಗೆ ಕಾಲಕಡಗ ಕೋಡಿಗೆ ಕೋಡಣಸು

ಗಲ್ಲು ಗಲ್ಲೆಂಬೋ ಹುಲಿಗೆಜ್ಜೆ-ಗಡಿಹಳ್ಳಿ: 5ge ಚನ್ನ ಬಸವಣ್ಣೆ ಬರುತಾನೆ

ಚನ್ನಬಸವಣ್ಣೆ ಬರುತಾನೆ ಅವರೀಗ ಉಟಾವ ಅವರೇ ಮಾಡುತ್ತಾರೆ

ಹಡದಮ್ಮು ಕಟ್ಟಿದ ಹಾಲಾಗರದ ಬುತ್ತೀಯ ಆಗ ಉಂಡೋರೆ ವಗುಳ್ಯಾರೆ ಶಿವನೇಯ ಕಾಮವ್ವನ ಕಯ್ಯಗುಳ ಅಡಿಗೇಯ

ಉಪ್ಪಿನ ಕಾಯಿಗೆ ತುಪ್ಪಾಗರ

ಹೆಚಾಲೆ

ಮತ್ತೆ ಉಂಡೋರೆ ವಗುಳ್ಯಾರೆ-ಶಿವನೇಯ ಕಾಮವ್ವನ ಕಯ್ಯಗುಳ ಅಡಿಗೇಯ

ಏಳೂರ ಮಾನ್ಯವ್‌ರೇ ಉಟಾವ ಮಾಡಿಕೊಂಡು ತಾಂಬೂಲ ಅವುರೇ ಹಾಕುತಾರೆ ಅವರೀಗ ಗುಡಿಗೂಡಿ ಅವುರೇ ಸೇರುತ್ತಾರೆ

೪೪

ಏಳೂರು ದೇವರ ಕಾಳಗ

ಜಲಕಲ ಮಲ್ಲಿ ಮ್ಯಾಗೆ ದುಮುಕಿ ದಂಡಿಳುದಂಗೆ ಏಳೂ ಮಾನ್ಯವುದೇ ಇಳುದಾರೆ

ಸಟ್ಟಿ ಆನಾವೇರಿ ಹತ್ತು ಸಾವುರಗದ್ದೆ ಗದ್ದೆಗು ಡಿರೈವು ಹೊಡಿಸ್ಯಾರೆ

ರಾಯ ಆನಾವೇರಿ ಆರು ಸಾವುರ ಗದ್ದೆ ಗದ್ದೆಗು ಡೀರೇವು ಹೊಡಿಸ್ಯಾರೆ

ಗದ್ದಾಗೆ ಇರುವೋದು ಯಾತಾರ ಮರನವ್ವ ದ್ರಾಕ್ಷಿ ರುದ್ರಾಕ್ಷಿ ಗಜನಿಂಬೆ-ಮರದಡಿಯ ದಂಡಾಬಿಟ್ಟಾನೆ ದಳವಾಯಿ

ಹಳ್ಳದಾಗಿರುವೋದು ಯಾತಾರ ಮರನವ್ವ

ಜಾತಿ ದಾಳಿಂಬೆ ಎಳಿಯಾಲು ಮರದಡಿಯ

ದಂಡಾ ಬಿಟ್ಟಾನೆ ದಳವಾಯಿ

ದಂಡಾ ಬಿಟ್ಟಾನೆ ದಳವಾಯಿ ತಿಮ್ಮಣ ಗದ್ದೆಗು ಡೀರೇವು ಹೊಡಿಸ್ಯಾನ

ಸಟ್ಟಿ ಆನಾವೇರಿ ಹತ್ತು ಸಾವುರ ಗದ್ದೆ ಕೊಯ್ಲಿಗೆ ಬಂದೇ ಐದಾವೆ

ರಾಯ ಆನಾವೇರಿ ಆರು ಸಾವುರ ಗದ್ದೆ ಕೋಯ್ಲಿಗೆ ಬಂದೇ ಐದಾವೆ

ಸಟ್ಟಿ ಆನಾವೇರಿ ದೊಡ್ಡ ಬತ್ತದ ಗದ್ದೆಯ ಅರಗಿಡುದು ಕೊಯ್ದು ಕುದುರೀಗಾನಾವೇರಿ ಗಂಡಾದರೊಬ್ಬು ಬರಹೇಳು

ರಾಯ ಆನಾವೇರಿ ಸಣಬತ್ತದ ಗದ್ದೆಯ

ಒಂದಿಡುದು ಕೊಯ್ದು

ಕುದುರೀಗಾನಾವೇರಿ

ದಿರನಾದರೊಲ್ಲು ಬರಹೇಳು

ಆನವೇರಿಯೋ ಸಣ ಬತ್ತದ ಗದ್ದೆಯ

ಒಂದಿಡುದೇ ಅವ್ರ ಕೊಯ್ತಾರೆ

bapc

ಏಳೂರು ದೇವರ ಕಾಳಗ

ಹುಲ್ಲು ಹೊರಿಯಾ ಕೊಟ್ಟು ಪುಲ್ಲಗೋರಿ ಕೊಟ್ಟು ಸಿದ್ಧಯ ಆಳ ಮಾಡಿ ಕಳುವಾನೆ-ಅವನೀಗ ದೊಡ್ಡುರು ದಂಡಿನಾಗೆ ಒಳಹೊಕ್ಕ

ಆಗದ ಹುಲ್ಲಿಗೆ ಹಣವಡ್ಡಿ ಹೇಳಿಕೊಂಡು ದೊಡ್ಡುರು ದಂಡಿನಾಗೆ ಒಳಹೊಕ್ಕಿರದಿಮ್ಮಣ್ಣ ನೋಡಿ

ಏನಂದೆ ಆಗೋ

ನುಡುದಾನೆ

ಕಾನ ಹಿಡುದರಿಗೆ ಕೊಳ್ಳ ಪದಕಾ ಕೊಡುವೆ ಹಳ್ಳಿ ಹಾಕುಸುವೆ ಹದಿನಾರಿರ ಕಾಮಯ್ಯ ಕಳ್ಳಾನಿಡುದಂತ ಬಂಟರಿಗೆ

ಕಳ್ಳಾನಿಡುದಂತ ಬಂಟರಿಗೆ ಅಂತೇಳಿ ಈರದಿಮ್ಮಣ್ಣೋ ನುಡುದಾನೆ

ಆಗಂದ ಮಾತು ಈರು ಕಾಮಯ ಕೇಳಿ

ಕಳ್ಳಾನ ಹೋಗಿ ಹಿಡುದಾನೆ

ಈರುಕಾಮಯ್ಯ ಹಿಡುಕಂಡು ಬಂದಾನು

ಹುಲ್ಲಾನೆ ಹೋರಿಯೋ ಕಿತಗಂಡು

ಹುಲ್ಲಾನೆ ಕಿತಗಂಡು ಪುಲ್ಲಗೋರಿ ಕಿತಗಂಡು ಬಿಗುದಾರೆ ಅವರೀಗ

ಪೀಚಂಡಿ ಹಗ್ಗೋ

ಸುಣ್ಣ ಕೆಮ್ಮಣ್ಣು ತರಿಸ್ಯಾರೆ

ಒಂದು ಕುಂಡಿಗೆ ಸುಣ್ಣ ಒಂದು ಕುಂಡಿಗೆ ಕೆಮ್ಮಣ್ಣು

ಸುಣ್ಣ ಕೆಮ್ಮೊಮ್ಮೆ ಬರುದಾರೆ

ನಿಂಗಾನ ಪಟ್ಟೋಂದು ತಿಮ್ಮಾನ ಪಟ್ಟ ಎಂದು ಸುಣ್ಣ ಕೆಮ್ಮಣ್ಣೆ ಬರುದಾರೆ

ಈ

ಗದ್ದಾಗೆ ಬಿದ್ದಿದ್ದೋ ಹಳೆಮಾರ ತಕ್ಕೊಂಡು ಚತ್ರೀಯ ಮಾಡಿ ನಿಲಿಸ್ಯಾರೆ

ಸದರ್ಮಿ ಹೊಟ್ಟಾಗೆ ಹುಟ್ಟಿ ಬಂದ್ಯೋ ನಾವೀಗ ಈಗುಟ್ಟಿ ಬಂದ ಮರಿಜಲುಮಾನಾವೇರಿ ಗಂಡಾದರೊಬ್ಬು ಬರಿಹೇಳು

೪೬

ಏಳೂರು ದೇವರ ಕಾಳಗ

ತೀರೊದರ್ಮಿ ಹೊಟ್ಟಾಗೆ ಈಗುಟ್ಟಿ ನಾವ್ ಬಂದ್ಯೋ ಈಗ್ ಬೆಳದೆ ಬಂದ್ಯೋ ಮರಿಜಲುಮಾನಾವೇರಿ ನ್ಯಾಯುಕು ಸಿದ್ದಾನ ಬರಿಹೇಳು

ಬರಿಹೇಳು ಅಂತೇಳಿ

ನ್ಯಾಯುಕು ಸಿದ್ದಾನ ಏಳೂರ ಮಾನ್ಯವ್ರೇ ನುಡುದಾರೆ

ಬಂದಂತ ಹುಡುಗ ವಾದಾನು ಸಿದ್ದಯ್ಯಗೆ ಸಿದ್ದಯ್ಯಗೆ ದೂರು ಹೇಳುತ್ತಾನೆ

ಬಾಳೆ ಹಣ್ಣಿನಂಗೆ ಬಂದವ್ ಬಹುರೀಗಡ್ಡ ಮುಂದಾಕೊಂದೊಂದೆ ಸಿರಿನ್ಯಾರೆ-ಶಿವನೇಯ ಬಂದೊರೊರೆಲ್ಲಾ ಹುಡುಗಾರೆ

ಬಂದೊರೊರೆಲ್ಲಾ ಹುಡುಗಾರೆ ಸಿದ್ದಯ್ಯ ಡಿವುದ ತುಂಬಾ ಮನಿಗ್ಯಾರೆ-ಸಿದ್ದಯ್ಯ ಈಗು ನಿನ ಪಟ್ಟಣುಕೆ ಉಳವಿಲ್ಲ

ಚೆಡ್ಡಿ ಚಳ್ಳಗದೋನು ಚಿಕ್ಕನಾನಾದೋನು ಇಲ ಬರುವೋ ಕೊನಿಮೀಸೆ-ಸಿದ್ದಯ್ಯ ಅವನೊವನಿಗೆ ಸಾಲ್ಲಲ್ಲೋ ನಿನಪಟ್ಟ

3

ಕುದುರೆ ಕುಣುಸುತಾನೆ ಚದುರಂಗನಾಡುತ್ತಾನೆ

ಇಟ್ಟಂತ ನಾಮ ಬೆವುತಾವೆ-ಸಿದ್ದಯ್ಯ

ಒಬ್ಬಾನೈದಾನೆ ಬಹುದೀರ

ಒಬ್ಬಾನೈದಾನೆ ಬಹುದೀರ ಸಿದ್ದಯ್ಯ

ಅವನೊಬ್ಬನಿಗೆ ಸಾಲ್ಲಲ್ಲೋ ನಿನಪಟ್ಟ

ಅಂಗಂದ ಮಾತು ಕೇಳ್ಯಾನೆ ಸಿದ್ದಯ್ಯ ಉಪ್ಪೆಯ ಮೆಳಿಯ ಹುಡುಕ್ಯಾನೆ

ಮೊಟುಬಳು ಚಿಕ್ಕಣ್ಣ ಆನವೇರಿ ಸಿದ್ದಯ್ಯ ಉಪ್ಪೇ ಮಳಿ ವಳಗೆ ಉದಿಕ್ಯಂಡ್ರಾನಾವೇರಿ ಜನುರೆಲ್ಲ ಆಗ ಹೋಗುತ್ತಾರೆ

whe

ಏಳೂರು ದೇವರ ಕಾಳಗ

ಹೆಂಡಾರ ಕರಕಂಡು ಮಕ್ಕಾಳೆಕೆಂಡು ದಂಡೀಯ ಬೇಲಿ ಮುರಕಂಡಾನಾವೇರಿ ವಕ್ಕಾಲೊಡವಡುದೇ ಹೋಗುತಾವೆ

ವಕ್ಕಾಲೊಡವಡುದೇ ಹೋಗಾದ ನೋಡ್ಯಾನ ಈರ ದಿಮ್ಮಣೋ ನುಡುದಾನೆ ಕತ್ತಾಲ ಊರಿಗೆ ಕಳ್ಳರ್‌ನುಗ್ಗಿದಾಂಗೆ ಬೋರೀ ಪಟ್ಟುಣಕೆ ನುಗ್ಗಲೇನು-ನಿಂಗಣ್ಣ ನುಗ್ಗಾನ ಬಾರೊ ಒಳವೀಕೆ

ಅಂಗಂದ ಮಾತು ನಿಂಗಣ್ಣ ಕೇಳ್ತಾನೆ ಕವುಡೆ ಆಟುಗುಳ ಆಡಾರ್

ನೀನೆ ಹಿರಿಯಯ್ಯಾಗೆ ನಾನೇ ಸಿದ್ಧ ಯಾಗುತೀನಿ

ಸೋಲು ಗೆಲುವುಗಳ ಆಡಸ್ತಾರೋ

ಚನ್ನಾಂಗದ ಹಲಗೆಯೋ ಹಿಡುದಾನೆ ನಿಂಗಣ್ಣ ಹನ್ನಲ್ಲೆ ಪಟ್ಟ ಅವಸೋತ ತಾಳೀಕಟ್ಟಿ

ದೊಡ್ಡಪ್ಪನ ಬಲವೇ ನಮಗೈತೆ

ಚನ್ನಾಂಗದ ಹಲಗೆಯೋ

socks

ಹಿಡುದಾನೆ ಮುರಳೀ ತಿಮ್ಮಣ್ಣ

ಹನ್ನೆಲ್ಲೇ ಪಟ್ಟ ಅವಗೆದ್ದ ತಾಳೀಕಟ್ಟಿ ನಮ್ಮಪ್ಪಾನ ಬಲವೇ ನಮಗೈತೆ

ನಮ್ಮಪ್ಪಾನ ಬಲವೇ ನಮಗೈತೆ ನಿಂಗಣ್ಣ ನುಗ್ಗಾನ ಬಾರೋ ಒಳವೀಕೆ

ದುಂದಿನೋನು ತಿಮ್ಮಣ್ಣೋ ಬಂದರ ನಿಲ್ಲೋನಲ್ಲ ಹೆಬ್ಬಾಗಲಾಗ ವಡಿಸ್ಯಾನೆ

ಮುಗಳೀ ತಿಮ್ಮಣ್ಣೋ ಬಂದರ ನಿಲ್ಲೋನಲ್ಲ ಕಂಡೀಯ ಆರ ವಡಿಸ್ಯಾರೆ

ಸುಟ್ಟ ಸುಕ್ಕರವಾರೊ ನೆಟ್ಟಗೆ ಮದ್ದನುದಾಗೆ ಹೆಬ್ಬಾಗಲವರೆ ವಡಿಸ್ಯಾರೆ-ನಿಂಗಣ್ಣ ನುಗ್ಗಾರಾನೇರಿ ಒಳವೀಕೆ

೪೭

ಮಟ್ಟ ಮಂಗಳವಾರೋ ನೆಟ್ಟಗೆ ಮದ್ದನುದಾಗೆ ಹೆಬ್ಬಾಗಲವರೇ ವಡಿಸ್ಯಾರೆ-ತಿಮ್ಮಣ್ಣ ವಾದಾರಾನೇರಿ ಒಳವೀಕೆ

ಕತ್ತಿ ಕಿತ್ತಾರೆ ಕಲಮ್ಯಾಲೆ ಇಟ್ವಾರು ನೆತ್ತಿಯ ಜುಂಜೋ ವದಿರಾವೆ-ನಿಂಗಣ್ಣ ಈಡ್ಯಾಡುತಾನೆ ತಲಿಗಾಳ

ಏಳೂರು ದೇವರ ಕಾಳಗ

ಕಂಡೇವ ಕಿತ್ತಾನೆ ಬಂಡೆ ಮ್ಯಾಲಿಟ್ವಾನೆ ಮಂಡೇಯ ಜಂಜೋ ವದಿರಾವೆ-ತಿಮ್ಮಣ್ಣ ಕ ಈಡ್ಯಾಡುತಾನೆ ತಲಿಗಾಳ

ಈಡ್ಯಾಡುತಾನೆ ತಲಿಗಾಳ ದಳವಾಯಿ ಶಪ್ಪೆ ಕಡುದಂಗೆ ಕಡುದಾನೆ-ದಳವಾಯಿ ಈಡ್ಯಾಡುತಾನೆ ತಲಿಗಾಳ

ಈಡ್ಯಾಡುತಾನೆ ತಲಿಗಾಳ ದಳವಾಯಿ ನಮ್ಮಪ್ಪನ ಕೊಂದೋರೆ ಸಿಗಲಿಲ್ಲ ಅಂತೇಳಿ ಹುಡುಕ್ಯಾಡುತ್ತಾನೆ ರಣುದಾಗ

ನಮತಂದೆ ಕೊಂದೋರೆ ಸಿಗಲಿಲ್ಲ ಅಂತೇಳಿ ನೋಡ್ಯಾಡುತಾನೆ ರಣುದಾಗಾನಾವೇರಿ ಹತ್ತು ಸಾವೂರೆಣ್ಣೆ ಬರುತಾವೆ

ಹತ್ತು ಸಾವೂರೆಣ್ಣ ಮುತ್ತೀನಾರತಿ ಮಾಡಿ ಮುತ್ತೀನಾರುತಿ ತರುತಾವೆ

ಆರು ಸಾವಾರು ಅನಾವೇರಿ ಹೆಣ್ಣು ಹವಳದಾರುತಿಯೋ ತರುತಾರೆ ಅವರೀಗ ನಿಂಗಣುಗಾರುತಿಯಾ ಬೆಳಿಗ್ಯಾರೆ

ವಾಲಿ ಬಾಗ್ಯವಕಾಯೋ ಬಾಳೋರ ಮೊಮ್ಮಗುನೆ

ಮೇಲುದುರುಗಾದ ದಳವಾಯಿ-ನಿಂಗಣ್ಣ ಮುತ್ತೈದೆತಾನ ಉಳಸಪ್ಪೋ

ಮುತ್ತೈದೆತಾನ ಉಳಿಸಿದ್ದುಂಟಾದರೆ

ಮುತ್ತಿನಾರುತಿಯ ಬೆಳಿಗ್ಯಾವೆ

ಏಳೂರು ದೇವರ ಕಾಳಗ

ಕೊಪ್ಪು ಬಾಗ್ಯಾವ್ ಕಾಯೋ ಅಪ್ಪಂತರ ಮೊಮ್ಮಗುನೆ

ದಳವಾಯಿ ತಿಮ್ಮಣ್ಣ

ಚಿತ್ರದುರುಗಾ ಮುತ್ತೈದೆತಾನ ಉಳುಸ

ಮುತ್ತೈದೆತಾನ ಉಳುಸಪ್ಪೋ ನಿಂಗಣ್ಣ ನೀ ವಾದ ರಾಜ್ಞಾನೇ ಬೆಳಿಯಾಲಿ ಅಂಗಂದ ಮಾತು ನಿಂಗಣ್ಣ ಕೇಳ್ತಾನೆ ಜಯಬೇರಿಯಾಗೋ ನಡಿಸ್ಯಾನೆ

ಜಯಬೇರಿ ವಡಿಸ್ಯಾನೆ ದರುಗಾಳೆ ಹಿಡಿಸ್ಯಾನೆ ತಮ್ಮ ತಿಮ್ಮಷ್ಪೋ ಬರುತಾನೆ ಆ ಹಿಡಿದು

ಎಡಗೈಗಲ್ಲಾ ಹಿಡಿದು ಬಲಗೈ ಕತ್ತಿ ಹಿಡುದು ಬಿಡು ನನ್ನ ತಮ್ಮಾ ನಿನ ಸಿಟ್ಟು-ನೀನೀಗ ವಾದ ರಾಜ್ಞಾವೇ ಬೆಳಿಲ

ಒಂದು ಕಯ್ಯಗು ಗಲ್ಲೋ ಒಂದು ಕಯ್ಯಗ್ ಕಟ್ಟೇವು ಮತ್ತೊಂದೆ ಬುದ್ದಿ ಹೇಳುತ್ತಾನೆ

ವಾದ ರಾಜ್ಞಾವೇ ಬೆಳಿಲಪ್ಪೋ ದಳವಾಯಿ ತಮ್ಮ ತಿಮ್ಮಣಗೆ ಹೇಳುತ್ತಾನೆ

B

ಆಚೆಕಾನಾವೇರಿ ಈಚಿಕೆ ಮಂಜಿನ ಗುಡ್ಡ ಬಿಳಿಯ ಕೂಳೀಗೆ ಮನಸ್ವಾತ್ಯ-ನಿಂಗಣ್ಣ ಕವದ ಕಯ್ಯ ತಡುದೆಲ್ಲೋ

ಹಿಂದಾಕಾನಾವೇರಿ ಮುಂದಕೆ ಮಂಜಿನಗುಡ್ಡ ಗಂಜಿ ಕೊಳೀಗೆ ಮನಸ್ವಾತ-ನಿಂಗಣ್ಣ ಕಾಳುಗದ ಕಯ್ಯ ತಡುದೆಲ್ಲೋ

ನಾರೇರ ಮಾತು ಲಾಲೀಸಿ ಕೇಳಿದೇನೋ ನಾರರ ಮಾತಿಗೆ ಬೆರಗಾದ್ಯ-ನಿಂಗಣ್ಣ ದೊಡ್ಡಪ್ಪನ ಕೂಟೆ ಹೇಳತೀನಿ

ನಿರ ಮಾತು ಚಿತವಿಟ್ಟು ಕೇಳಿದೇನೊ ನಿರ ಮಾತಿಗೆ ಬೆರಗಾದ್ಯ

20

ಏಳೂರು ದೇವರ ಕಾಳಗ

ಹೆಂಡಾರಿದ್ದೋನು ನೀನು ಮಕ್ಕಾಳಿದ್ದೋನು ನೀನು ನಾರರ ಮಾತಿಗೆ ಬೆರಗಾದ್ಯ-ನಿಂಗಣ್ಣ ನಾರರ ಮ್ಯಾಲೆ ಗ್ಯಾನಬಿದ್ದ

ನಾರರ ಮ್ಯಾಲೆ ಗ್ಯಾನಬಿದ್ದ, ನಿಂಗಣ್ಣ

ನಮ್ಮಪ್ಪಾನ ಕೂಟೆ ಹೇಳತೀನಿ

ನಮ್ಮಪ್ಪನ ಕೊಂದೋರು ನನಗೀಗ ಸಿಗದಿದ್ದೆ ಹೊಕ್ಕಲ್ಲಿ ನೀರಾ ತ ತರಸೂವೆ

ಹೊಕ್ಕಲ್ಲಿ ನೀರಾ ತರಸಾದಿದ್ದರೆ ನಾನು ಪುಂಡಾ ಜಂಗಮರೋ ಮಗನಲ್ಲಾ ನಾವೇರಿ ಸಿದ್ದನ ಹೆಂಡಿರ ಕೈಸೆರಿಯೊ ಹಿಡಸೂವೆ

ಸಟ್ಟೆ ಆನಾವೇರಿ ಹತ್ತು ಸಾವೂರೆಗ್ಯೂ ನನ್ನೊಲಿ ನಾನು ನಿಲಸೂವೆ

ರಾಯ ಆನವೇರಿ ಆರು ಸಾವೂರೆಣ್ಣ ವಾರೀಲಿ ನಾನು ನಿಲವೆ

ವಾರೀಲಿ ನಾನು ನಿಲಸೂವೆ ನಾನೀಗ ಅವರೊಟ್ಟೆಗಳ ಪಿಂಡಾನ ತಗಸೂವೆ-ನಾನೀಗ ನನ ಕಯ ಮ್ಯಾಲೆ ನಿಲಸೂವೆ

ನನ ಕಯ ಮ್ಯಾಲೆ ನಿಲಸಾದಿದ್ದರೆ ನಾನು

ಕೆಂಡಾಗಣ್ಣಿನೋರ ಮಗನಲ್ಲೋ

ದಂಡಿನ ದಳಪೋತಿ ನುಡುದಾನೆ

ಅಂತೇಳಿ

ಅಗಳಿಗಗಳಿಗಾಕಿ ಜಗಳ ಮಾನ್ಯವರೇ ವಡುದಾಡಿ ಮಗನಿಗಾಕಿಸಿದ ಕೈಪಂಜ

ಜಗಳ ಮಾನ್ಯರೇ ವಡುದಾಡಿ ನಿಂಗಣ್ಣ ಹುಡುಕ್ಯಾಡುತ್ತಾನೆ ರಣುದಾಗೆ

ನಾವೇ ಸತ್ತೇವೆಂದು ಅವ್ರ ಸತ್ತಾರೆಂದು ನೋಡ್ಯಾಡುತ್ತಾನೆ ರಣುದಾಗ

H

ಏಳೂರು ದೇವರ ಕಾಳಗ

ವಾದಾ ದಂಡಿನಾಗೆ ಒಂದಾಳು ಕಡಿವಿಲ್ಲ ಬಂದೋರೆ ಎಲ್ಲಾ ಸುಖವಾಗಿ ಐದೇವೆ ದೊಡ್ಡಪ್ಪನ ಬಲವೇ ನಮಗೃತಿ ದೊಡ್ಡಪ್ಪನ ಬಲವೇ ನಮಗೈತಿ ಅಂತೇಳಿ ಶಿವನೇ ನಿಂಗಣ್ಣ ನುಡುದಾನೆ

ನಮ್ಮಪ್ಪನ ಕೊಂದೋರು ಸಿಗಲಿಲ್ಲ ಅಂತೇಳಿ ನೋಡ್ಯಾಡುತ್ತಾನೆ ದಳವಾಯಿ

ಹತ್ತಿಯ ಮರವೋ ಹತ್ಯಾನ ದಳವಾಯಿ ಹತ್ತಿ ಕಡುದಾನೆ ಮಳಿಗಾ

ಆಲಾದ ಮರವೋ ಹಾರಾನೆ ತಿಮ್ಮಣ್ಣ ಹಾರಿ ಕಡುದಾನೆ ಮೆಳಿಗಾ-ತಿಮ್ಮಣ್ಣ ಉಪ್ಪೇಯ ಮಳಿಯ ಕಡುದಾನೆ

ಉಪ್ಪೆಯ ಮೆಳಿಯೋ ಕಡುದು ಬಾಗಾಮಾಡಿ ಆನವೇರಿ ಸಿದ್ಧಯ್ಯೋ ಸಿಗುತ್ತಾನೆ

♡

ನಮ ತಂದೆ ಕೊಂದೋರು ಸಿಕ್ಕಾನು ಅಂತೇಳಿ ರಟ್ಟಿಗು ಕಹಚ್ಚಿ ಯಳುದಾನಿರುದಿಮ್ಮಣ ಮೊಟುಬಳು ಚಿಕ್ಕಣುನ ತಲಿಗಾಳ

ಮೊಟುಬುಳು ಚಿಕ್ಕಣ್ಣು ನೋ ತಲಿಗಾಳ ತಕ್ಕೊಂಡು ಆನವೇರಿ ಸಿದ್ದಯ್ಯೋ ಹಿಡುದಾನೆ ದಳವಾಯಿ ಸಿದ್ಧಯೆಂಡಾರೆ ಬರುತಾರೆ

ಆನವೇರಿ ಸಿದಯ್ಯಗೆ ಏಳುಜನ ಹೆಂಡಾರು ಮುತ್ತೀನಾರುತೀಯ ತರುತಾರೆ

ವಾಲಿಬಾಗ್ಯವ ಕಾಯೋ ಬಾಳೋರ ಮೊಮ್ಮಗುನೆ ಮುತ್ತೈದೆತಾನ ತಲಿಗಾಯೊ.ತಿಮ್ಮಣ್ಣ ಮುನಾರುತಿಯ ಬೆಳಗೇವು

ಕಪ್ಪು ಬಾಗ್ಯವ ಕಾಯೊ ಅಪ್ಪಂತರ ಮೊಮ್ಮಗುನೆ ಮುತ್ತೈದೆತಾನ ತಲಿಗಾಯೊ

ಮುತ್ತೈದೆತಾನ ಉಳಿಸಿದ್ದುಂಟಾದಾರೆ ಕಂಡವುದ ಕಯ್ದೆ ಜಯ ಜಯ-ಅಂತೇಳಿ ಹವಳದಾರುತಿಯ ಬೆಳುಗ್ಯಾರೆ

ಏಳೂರು ದೇವರ ಕಾಳಗ

ನಾನೆದ ಕಯ್ಯೋ

ಇಳುವದಿಲ್ಲಾ ಅಂದು

ಆನವೇರಿ ಸಿದ್ದಯ್ಯ ಹೇಳುತ್ತಾನೆ

ಆನವೇರಿ ಸಿದ್ದಯ್ಯೋ

ಪಟ್ಟಾದ ಆನೇಯ

ಆನೆ ಸೊಂಡಲವ ಅರಿವಡುದು-ತಿಮ್ಮಣ್ಣ

ನಮ್ಮೊಕ್ಕಾಲ ನಮಿಗೆ ಕಳಿಕೋಡೊ

ನನ್ನೊಕ್ಕಾಲ ನಿಮಗೆ ಕಳಿಕೊಡೋ ಸಿದ್ದಯ್ಯ ನಮುಲೆಕ್ಕ ನಮಿಗೆ ಕೊಡುಬಾರೊ

ಬೀಸಿದ ಬತ್ತಲೆಕ್ಕ ಅರುದ ಕಾರುವ ಲೆಕ್ಕ

ಸಂಭಾರದ ಲೆಕ್ಕ

ಕೊಡುಬಾರೊ

ಅರುದ ಕಾರುದ ಲೆಕ್ಕ

ಅರುದ ಸಂಭಾರಲೆಕ್ಕ

ಮತ್ತೊಂದೆ ಲೆಕ್ಕ ಬರಬೇಕೆ

ಮೆಣಸು ಮೆಂತ್ಯವುದ ಲೆಕ್ಕ ನೀರುಳಿ ಬೆಳ್ಳುಳಿ ಲೆಕ್ಕ

ಇನ್ನೊಂದೆ ಲೆಕ್ಕ ಬರಬೇಕೆ

ಮಡಿವಾಳರ ಲೆಕ್ಕ ಕೊಡಬೇಕೆ ಸಿದ್ದಯ್ಯ

ಆಯಗಾರರ ಲೆಕ್ಕ ಕೊಡುಬಾರೋ

ನಮಲೆಕ್ಕ ನಮಿಗೇನೆ ಕೊಟ್ಟೆಲ್ಲೊ ಸಿದ್ದಯ್ಯ ನಮ್ಮಪ್ಪನ ಗಾಯ್ಕನ ಕೊಡತೀಯೊ

ನಮ್ಮಪ್ಪನ ಗಾಯ್ಕನ ಕೊಡತೀಯೊ ಅಂತೇಳಿ ಬಕ್ಕಸದ ಮನಿಗೆ ಹೋಗುತ್ತಾರೆ

ಆನವೇರಿ ಸಿದ್ದಯ್ಯನ ಭಂಡಾರದಾ ಮನಿಯ ಭಂಡಾರದ ಮನಿಯೋ ಹೋಗುತ್ತಾರೆ-ತಿಮ್ಮಣ್ಣ Co

ಬಗಸೆ ಬಂಡಾರ ಬಳಕಂಡ

ವಾಲ

ಲ ಕರಕಂಡು ಗೂಡೇ ಹೊರಸಿಕೊಂಡು ವಕ್ಕುಲ ಕರಕಂಡೇ ಹೊರುಟಾರೆ

ಏಳೂರು ದೇವರ ಕಾಳಗ

ವಾದ ವಕ್ಕಲು ಕರಕಂಡು ತಿಮ್ಮಣ್ಣ ಗೂಡೇ ಹೊರಿಸ್ಕಂಡೇ ಬರುತ್ತಾನೆ ಮಕ್ಕಾಳೆತ್ತಿಕೊಂಡು ಗೂಡೇ ಹೊರಿಸಿಕೂಂಡು ಮಕ್ಕಳ ಕಯೊಳಗೆ ಇಡಕಂಡು

ತಂದೆ ವಕ್ಕಾಲು ಕರಕಂಡು ತಿಮ್ಮಣ್ಣ ಹಲಕೂರ ದನವೋ ಹೊಡಕಂಡು-ತಿಮ್ಮಣ್ಣ ಕಂಡೆವುದೊ ಕಯ್ಯೋ ತೊಳದಿಲ್ಲ

ಕಂಡೆವುದೊ ಕಯ್ಯೋ

ತೊಳದಿಲ್ಲ ತಿಮ್ಮಣ್ಣ

ಯಿಂದೇ ಗಂಬೀರೊ ಬರುತಾನೆ

ತಂದೆ ನಕ್ಕಾಲು

ಲು ಕರಕಂಡು ನಿಂಗಣ್ಣ

4*

ಆನವೇರಿ ಬಿಟ್ಟೇ ಬರುತಾನೆ

ಅವರಪ್ಪಾನೊಕ್ಕಾಲು ಕರಕಂಡು ನಿಂಗಣ್ಣ

ಆನವೇರಿ ಬಿಟ್ಟೋ ಬರುತಾರೆ-ಆಗಿನ್ನು ಗಡಿಹಳ್ಳಿ ಬಸವಣೋ

೮

ಬರುತ್ತಾನೆ

ಈರ ಬಸವ ಬಂದಾನೆ ಆಗಿನ್ನು ಕಲ ಕೆರದೇ ಡಿರಿಕೇ ಹೊಡುದಾನೆ-ನಿಂಗಣ್ಣ ಕೋಡೀಲಿ ಕ್ವಾಟೆ ಕೆಡುವಾನೆ

ಕೋಡೀಲಿ ಕ್ವಾಟಿ ಕೆಡುವ್ಯಾನೆ ಬಸವಣ್ಣ ಏನಂದು ಆಗ ನುಡುದಾನೆ

ನಾನು ಕೆಡುವಿದ ಕ್ವಾಟೆ ನೀವಿಗ ಕಟ್ಟಿದುರೆ

ಯಾವತ್ತಿಗು ನ್ಯಾಯೋ ಅರಿಯಾದ

ಕೆಡವೀದ ಕ್ವಾಟೆಯಾ ಕಟ್ಟಿದುರೆ ನೀವೀಗ ಎಂದೆಂದಿಗೂ ನ್ಯಾಯೊ ಅರಿಯಾದೆ

ನಮಿಗೂ ನಿಮಿಗೂ ಯಾಜ್ಞ ಅರಿಯಾದು ಅಂತೇಳಿ ಈರ ಬಸವಣ್ಣೆ ನುಡುದಾನೆ

ಏಳೂರು ಮಕ್ಕಾಳೂ ವಕ್ಕಾಲ ತಂದೆ ತಳಮನಿಗೆ ಬರುತಾರೆ

ಕರಕಂಡು

ೞ೩

おる

ಏಳೂರು ದೇವರ ಕಾಳಗ

ನನಾಡು ವುವ್ವಲೆ ಕೊಡುವೆ ತೂಗೊ ಮಂಚ ಕೊಡುವೆ

ಜೋಡೀನ ಪಡಿಯ ಅಳಸೂವೆ ನಿಂಗಣ್ಣ ಜೋಡಲಗಿನ ಮ್ಯಾಲೆ ಕುಣಸೂವೆ

ಜೋಡಲಗಿನ ಮ್ಯಾಲೆ ಕುಣಸೂವೆ ನಿಂಗಣ್ಣ ಮಾನ್ಯ ದೊಕ್ಕಾಲ ಕೊಡತೀನಿ

ದಂದೂರಂಬೋದ ಗಂಡು ಭೂಮಿ ಕೊಡುವೆ ಹಿಂಡೀನ ಕುರಿಯ ಹೊಡಕೊಡುವೆ-ನಿಂಗಣ್ಣ ಮಾನ್ಯ ದೊಕ್ಕಾಲ ಕೊಡುತೀನಿ

ಮಾನ್ಯವ್ ದೊಕ್ಕಾಲ ಕೊಡುತೀನಿ ಅಂತೇಳಿ ತಂದೆ ಹಿರಿಯಯ್ಯ ನುಡುದಾನೆ

ಮಗನು ತಿಮ್ಮಣ್ಣನೋ ಮುದ್ದಾಡಿ ಹಿರಿಯೇಶ ಮತ್ತೇನ ಅವರು ಕೊಡುತ್ತಾರೆ

ನಾನಾಡೋ ವುವ್ವಲೆ ಕೊಡುವೆ ಏರೆ ಮಂಚ ಕೊಡುವೆ ಜನ ಪಡಿಯ ಅಳಸೂವೆ-ತಿಮ್ಮಣ್ಣ

ಕಟ್ಟಲಗಿನ ಮ್ಯಾಲೆ ಕುಣಿಸೂವೆ

ಕಟ್ಟಲಗಿನ ಮ್ಯಾಲೆ ಕುಣಿಸೂವೆ ತಿಮ್ಮಣ್ಣ ಮಾನ್ಯವಾಕುಸುವೆ ಮಗನಿಗೆ

cu circ

ನೀನಾಡೋ ವುವ್ವಲೆ ನಲ್ಲೆ ತೂಗೊ ಮಂಚ ನಲ್ಲಿ

ಜೋಡೀನ ಪಡಿಯೋ ನಾನೊಲ್ಲೆ-ದೊಡ್ಡಪ್ಪ

ಜೋಡಲಗಿನ ಮ್ಯಾಲೆ ಕುಣಿವ

ಜೋಡಲಗಿನ ಮ್ಯಾಲೆ ಕುಣಿವಲ್ಲಿ ಬ್ಯಾಲನೂರ

ಅದರಗು ನನ್ನೆಸುರ ಕರಸಪ್ಪ

ನೀತೂಗೋ ವುವ್ವಲೆ ನಲ್ಲೆ ಏರೊ ಮಂಚವ

ಜೋಡೀನ ಪಡಿಯ ನಾವ-ನಮ್ಮಪ್ಪ ಕಟ್ಟಲಗಿನ ಮ್ಯಾಲೆ ಕುಣಿವ

ಕಟ್ಟಲಗಿನ ಮ್ಯಾಲೆ ಕುಣಿವಲ್ಲಿ ನಮ್ಮಪ್ಪ ಮೊದಲು ದೆಸುರ ಕರಸಪ್ಪ

೫೪.

ಏಳೂರು ದೇವರ ಕಾಳಗ

ದಪ್ಪನ ದೋಣ ಬಡಿಸ್ಯಾರೆ ನಿಂಗಣ್ಣ

ಬೋರಾಡಿ

ಡಿ ಕಾಳೆ ಹಿಡುದಾರೆ

609

ಕಾಳೇಯ ಸಬುದಾವೂ ಹಿರಿಯಯ್ಯ ಕೇಳ್ಯಾನು ಏನಂದೆ ಆಗೋ ನುಡುದಾನೆ

ನನಕಪ್ಪೆ ಮ್ಯಾಗಳ ಗಾಯೊ ಒಬ್ಬೊಬ್ರ ಬಿಗಿ ಮಗುನೆ ಕಯ ತಾರೋ ನನ ಕೈಲಿ ನನ ಮಗುನೆ ಯಾವ್ ರಾಯರ ದಂಡೇ ಬರುತಾವೆ

ನನಕೆನ್ನೆ ಮ್ಯಾಗಲ ಗಾಯೊ ಅಣ್ಣಣ್ಣಿ ಬಿಗಿ ಮಗುನೆ ಕಂಡೇವ ತಾರೊ ನನ ಕೈಲಿ ನನ ಮಗುನೆ ಯಾವ ರಾಯರ ದಂಡೇ ಬರುತಾವೆ

ತಮ್ಮಾನ ಮಗ ಆಗ್ತಾನಂದು ಮಾಡಿದ್ದೆ ದಾದೀಯ ಮಾಗೋ ಬರಲಿಲ್ಲ

ತಮ್ಮಾನ ಮಗ ಎಚ್ಚಾಗ್ತಾನಂದು

ನಿಚ್ಚಕೆಂಡಿದ್ದೆ ಮನುದಾಗೆ ಶಿವನೇ ನಿಂಗ

ಟಕೆ ಬಂದ ನನಕೂಟೆ

ಚೆನ್ನಾಟಕ

ಚೆನ್ನಾಟಕೆ ಬಂದ ನನಕೂಟೆ ಅಂತೇಳಿ ತಂದೆ ಹಿರಿದುಯ್ಯೋ ನುಡುದಾನೆ

ತಂದೆ ಹೇಳಿದ ಮಾತು ಕೇಳ್ಯಾನೆ ದಳವಾಯಿ ಆಲಾದ ಮರವೊ ನೋಡುತ್ತಾನೆ

ಆಲಾದ ಮರವೋ ಆಲ್ಯಾನೆ ದಳವಾಯಿ ಹಾರಿ ನೋಡ್ಯಾನೆ ಪರಿಶೀಯ-ಬ್ಯಾಲನೂರ ಕ್ಕಾಲೆ ಬರುತೈತೆ

ಮಾನ್ಯ

ಹಳ್ಳಿಯ ಮರವೋ ಹತ್ತಾನೆ ದಳವಾಯಿ ಹತ್ತಿ ನೋಡ್ಯಾನೆ ಪರಿಶೀಯಾ-ಬ್ಯಾಲನೂರ ಹೆಚ್ಚೆನೊಕ್ಕಾಲೆ ಬರುತೈತೆ

ಹೆಚ್ಚೆನೊಕ್ಕಾಲೆ ಬರುತೈತೆ ನಿಂಗಣುನ ಚೆನ್ನಗಾಳಿಗುಳ ಹಿಡುದಾವೆ.

ಏಳೂರು ದೇವರ ಕಾಳಗ

ದಪ್ಪನ್ನ ದೋಣ ಬಡಿಸ್ಯಾನೆ ತಿಮ್ಮಣ್ಣ ತಂದೆ ಪಟ್ಟುಣಕೆ ಬರುತ್ತಾರೆ

ಅಣ್ಣಾನೆ ತಿಮ್ಮಣುನ ದೋಣುಗಳು ಬಡುದಾವೆ ಅಣ್ಣಾ ತಿಮ್ಮಣ್ಣ ಬರುತಾನೆ

ವಾದ

ಲು ಕರಕಂಡೇ ನಮ್ಮಪ್ಪ

ವಕ್ಕಾಲು

ಅಣ್ಣಾ ನಿಂಗಣ್ಣ ಬರುತ್ತಾನೆ

ಹತ್ತು ಬಿರುದಿಗಿನ್ನು ಮೇಲಾದ ಬಿರುದಪ್ಪ ಮೇಲಾದೊಕ್ಕಾಲೆ ಬರುತ್ಯೆತೆ

ಆರು ಬಿರುದಿಗಿನ್ನು ಹೆಚ್ಚಿನ ಬಿರುದಪ್ಪ ಹೆಚ್ಚಿನೊಕ್ಕಾಲೆ ಬರುತ್ಯೆತೆ

ವಕ್ಕಾಲ ಕರಕಂಡು ಗೂಡೆ ಹೊರಸಿಕೊಂಡು ಹಿರಿಯಯ್ಯನ ಮುಂದೆ ನಿಲಿಸ್ಯಾರೆ

ಲು ಕರಕಂಡು ನಿಂಗಣ್ಣ

ವಾದ ವಕ್ಕಾಲು

ತಂದೆಯ ಮುಂದೆ ನಿಲಿಸಾನೆ

ನಿಮ್ಮಪ್ಪ ಹಿರಿಯಯ್ಯಗೆ ಕೆಪ್ಪೆ ಮ್ಯಾಗುಳಗಾಯ ಸುತ್ತುಲು ಮಾನ್ಯವಗ್ಗೆ ಚಿಗುರ್‌ಗಾಯ ಅಂಬೋಸುದ್ದಿ ನಿಂಗಣ ನಿನ್ನ ಬಳಿಗೆ ಬರುಲಿಲವೆ

ನಿಮ್ಮ ತಂದೆ ಹಿರಿಯಯ್ಯಗೆ ಕೆನ್ನೆ ಮ್ಯಾಗುಳಗಾಯ ಏಳೂರ ಮಾನ್ಯವಗ್ಗೆ ಚಿಗುರ್ ಗಾಯ ಅಂಬೋಸುದ್ದಿ ತಿಮ್ಮಣ್ಣ ನಿನ ಬಳಿಗೆ ಬರಲಿಲ್ಲವೆ

ತಿಮ್ಮಣ್ಣ ನಿನ್ನ ಬಳಿಗೆ ಬರಲಿಲವೆ ಅಂತೇಳಿ ದೊಡ್ಡವ್ ಕಾಮಾಲೆ ನುಡುದಾಳೆ

ಈಗ ಬರುವ ವಾಲೆ ಮುಂದಾಗಿ ಬಂದಿದ್ದೆ ಮಂದಿ ಬಲಗೊಂಡೆ ಬರತಿದ್ದೆ ದೊಡ್ಡವ್ವ ಲಯವಾದ ಮ್ಯಾಲೆ ಕಳಬಹುದೆ ಮುಂದೆ ನಿಂಗಣ್ಣ ನಿತ್ತಾನೆ ಹಿರಿಯಯ್ಯ ಮಗುನ ತಬ್ಬಾಕಿ ಅವುಚಿ-ಮುದ್ದಾಡ್ಯಾನೆ ಕಂದಮ್‌ಗೆ ಕೊಡುವೆ ಘನ ಬಿರುದು

೫೩

ಏಳೂರು ದೇವರ ಕಾಳಗ

ನನಾಡು ವುವ್ವಲೆ ಕೊಡುವೆ ತೂಗೊ ಮಂಚ ಕೊಡುವೆ

ಜೋಡೀನ ಪಡಿಯ ಅಳಸೂವೆ ನಿಂಗಣ್ಣ ಜೋಡಲಗಿನ ಮ್ಯಾಲೆ ಕುಣುಸೂವೆ

ಜೋಡಲಗಿನ ಮ್ಯಾಲೆ ಕುಣುಸೂವೆ ನಿಂಗಣ್ಣ ಮಾನ್ಯ ದೊಕ್ಕಾಲ ಕೊಡತೀನಿ

ದಂದೂರಂಬೋದ ಗಂಡು ಭೂಮಿ ಕೊಡುವೆ ಹಿಂಡೀನ ಕುರಿಯ ಹೊಡಕೊಡುವೆ-ನಿಂಗಣ್ಣ ಮಾನ್ಯ ದೊಕ್ಕಾಲ ಕೊಡುತೀನಿ

ಮಾನ್ಯವ್ ದೊಕ್ಕಾಲ ಕೊಡುತೀನಿ ಅಂತೇಳಿ ತಂದೆ ಹಿರಿಯಯ್ಯ ನುಡುದಾನೆ

ಮಗನು ತಿಮ್ಮಣ್ಣನೋ ಮುದ್ದಾಡಿ ಹಿರಿಯೇಶ ಮತ್ತೇನ ಅವರು ಕೊಡುತ್ತಾರೆ

ನಾನಾಡೋ ವುವ್ವಲೆ ಕೊಡುವೆ ಏರೆ ಮಂಚ ಕೊಡುವೆ ಜನ ಪಡಿಯ ಅಳಸೂವೆ-ತಿಮ್ಮಣ್ಣ

ಕಟ್ಟಲಗಿನ ಮ್ಯಾಲೆ ಕುಣಿಸೂವೆ

ಕಟ್ಟಲಗಿನ ಮ್ಯಾಲೆ ಕುಣಿಸೂವೆ ತಿಮ್ಮಣ್ಣ ಮಾನ್ಯವಾಕುಸುವೆ ಮಗನಿಗೆ

cu circ

ನೀನಾಡೋ ವುವ್ವಲೆ ನಲ್ಲೆ ತೂಗೊ ಮಂಚ ನಲ್ಲಿ

ಜೋಡೀನ ಪಡಿಯೋ ನಾನೊಲ್ಲೆ-ದೊಡ್ಡಪ್ಪ

ಜೋಡಲಗಿನ ಮ್ಯಾಲೆ ಕುಣಿವ

ಜೋಡಲಗಿನ ಮ್ಯಾಲೆ ಕುಣಿವಲ್ಲಿ ಬ್ಯಾಲನೂರ

ಅದರಗು ನನ್ನೆಸುರ ಕರಸಪ್ಪ

ನೀತೂಗೋ ವುವ್ವಲೆ ನಲ್ಲೆ ಏರೊ ಮಂಚವ

ಜೋಡೀನ ಪಡಿಯ ನಾವ-ನಮ್ಮಪ್ಪ ಕಟ್ಟಲಗಿನ ಮ್ಯಾಲೆ ಕುಣಿವ

ಕಟ್ಟಲಗಿನ ಮ್ಯಾಲೆ ಕುಣಿವಲ್ಲಿ ನಮ್ಮಪ್ಪ ಮೊದಲು ದೆಸುರ ಕರಸಪ್ಪ

ಏಳೂರು ದೇವರ ಕಾಳಗೆ

ಹತ್ತು ಬಿರುದಿಗಿನ್ನು ಹೆಚ್ಚಿನ ಬಿರುದೈತೆ : (೧ ಹೆಚ್ಚಿನೊಕ್ಕಾಲೆ ನಿನಗೈತೆ-ಬ್ಯಾಲನೂರ ಹೆಸರೂ ಕರಸಪ್ಪೋ ಗಂಡೇ

ಆರು ಬಿರುದಿಗಿನ್ನು ಮೇಲಾದ ಬಿರುದೈತೆ ಮೇಲಾದೊಕ್ಕಾಲೆ ನಿನಗೈತೆ-ಬ್ಯಾಲನೂರ ಹೆಳೊ ಹೆಸರೊ ಕರಸಪ್ಪೋ

ಗಂಡು ಹುಟ್ಟಿದರೆ ನಿಂಗ ಹೆಣ್ಣು ಹುಟ್ಟರೆ ತಿಮ್ಮಿ ಮೊದಲುಟ್ಟಿದೆಸುರ ಕರಸ

ಶಿವನೇಯ ನಿಂಗಣೋ ಮುಗಳಿಯ ತಿಮ್ಮ ಮುಂದೇಳೊ ಹೆಸರ ಕರಿಷ್ಯಾರೆ

ಬೇಲಿಮ್ಯಾಗುಳುವ ಬೆಳ್ಳಗಿದ್ದಾರೇನೇ ತೆಳ್ಳಗಿದೋನೆ ಬಲುಬಂಟ ತಿಮ್ಮಣ್ಣ ಗಡಿನಾಡ ಯ್ಯಾಜ್ಞ ಗೆದ್ದು ಬಂದ

♡

ಗಡಿನಾಡ ಯಾಜ್ಞ ದೊಡ್ಡವ್ವ ಕಾಮಾಲೆ ನುಡಿದಾಳೆ

ಗೆದು ಬಂದ ಅಂತೇಳಿ

ಬಂದ ಮಕ್ಕುಳಿಗೆ ಶರಣು ಸಂಪತ್ತಾಗಿ ವಾದ ನಕ್ಕಾಲು ಕರತಂದ್ರು ಅಂತೇಳಿ ಹಿರಿಯಯ್ಯ ಆಗೊ ಹೊರುಟಾನೆ

ಮನೆಬಾಗಿ ದಿಬ್ಬಾವೋ ಬಿಟ್ಟಾನೆ ಹಿರಿಯಯ್ಯೋ ತಂದೆ ಬೀರೇಶ್ ಹೊರಟಾನೆ

ವಕ್ಕಾಲ ಕರಕಂಡು ಮಕ್ಕಳ ಕರಕಂಡು ತಳಮನಿಗೆ ಅದ್ರೆ ಬರುತ್ತಾರೆ

ಏಳೂರು ಮಕ್ಕಳು ನೊಂದಾರು ಅಂದೇಳಿ

ತಂದೊಂದ ಮಾತ ನುಡುದಾನೆ

obe

ಹಿಗ್ಗ ಬ್ಯಾಡೊ ಕುಗ್ಗ ಬ್ಯಾಡೊ ಕುಗ್ರಾಮ ಪಡಬ್ಯಾಡೊ ಇದ್ದ ಮಟ್ಟಿಗೆ ಇರಹೋಗೊ ಬ್ಯಾಲನ ಕುರುಬ ಒಂದೊಕ್ಕಲಾಗಿ ಬದುಕೋಗೊ

2

ಒಂದೊಕ್ಕಲಾಗಿ ಬದುಕೋಗೊ ಅಂತೇಳಿ ತಂದೆ ಬೀರೇಶ ನುಡುದಾನೆ

ಮಕ್ಕಾಳ ಕರಕಂಡು ತಳಮನಿಗೆ ಬಂದಾರು ಅಲ್ಲೊಂದು ರಾತ್ರೆ ಉಳುದಾರೆ

ಬಂದ ಮಕ್ಕಳಿಗೆ ಯಡಿಯ ಬೀಡಲು ಮಾಡಿ ವುಡುಗರುಚ್ಚಾಯ ಕೊಡುತ್ತಾರೆ

ಬಂದ ಮಕ್ಕಳಿಗೆ ಶರಣು ಸಂಪತ್ತಾಗಿ ಮಕ್ಕಳ ಕಳುವಾಕೆ ಹೊರಟಾರೆ

ಆರು ತಿಂಗಳು ನಿದ್ರೆ ಆರು ತಿಂಗಾಳೆಚ್ಚು ವನಮಲ್ಲಿ ದೊರಿಗೆ ಎಚ್ಚರಾಯ್ತು-ಮಲ್ಲೆಪ್ಪ ಏನಂದೆ ಆಗ ಕೇಳುತ್ತಾನೆ

ಕರಿ ಎಲಿಯ ಕಾಮ ಬಾರೋ ನಿಂಗಣ್ಣ ಎಳಿಯ ಹೊಂಬಾಳೆ ಬಾರೋ

ಸಕ್ಕೂರ ಮೂಡಿ ಹತ್ತು ತಾಸಾದಾವೊ ಪುತ್ರ ನಿಂಗಣುನ ಸುಳವಿಲ್ಲ-ಕಾಮಾಲೆ

ಏಳೂರು ದೇವರ ಕಾಳಗ

ಯಾವ ನಾಡಿಗೆ ಮಗನ ಕಳಿಕೊಟ್ಟೆ. ಇರು

ಸಮ್ಮೂರ ಮೂಡಿ ಆರು ತಾಸಾದಾವು

ಬಾಲಾ ನಿಂಗಣುನ ಸುಳವಿಲ್ಲ-ಕಾಮಾಲೆ ಯಾವ ನಾಡಿಗು ಮಗನ ಕಳಿಕೊಟ್ಟೆ

ಕಣಿವೆ ಕೆಳಗ್ಲಿಂದೆ ದೊಡ್ಡರುತ್ತರ ಬಂದು

ನಿಲ್ಲುದಲೆ ವಾದ ನಿನ ಮಗ

ತಾಳೀಕಟ್ಟಿಂದೊ ತೂರಾಡುತ ಬಂದಾ ವಾಲೇಗೆ

ಕೇಳುದು ವಾದ ನಿನ ಮಗ

ಕತ್ತಿ ಹಿಡಿಯಲರಿಯೊ ಕ್ಯಾಲೆ ತಿರುವುಲರಿಯೊ ಕಾಳುಗದ ಕಯ್ಯೋ ಮೊದಲರಿಯ-ನಮ್ಮಣ್ಣ ಅರಿಯಾದ ಮಗನ ಕರಸ್ವಹುದೆ

ಏಳೂರು ದೇವರ ಕಾಳಗ

ಅಣ್ಣಾನಾದಾರೆ ನಾಳೆ ನೋಡಿಕೆಣುವೆ ಅರಿಯಾದ ಮಗನ ಕರಸ್ವವುದೆ ನಮ್ಮಣ್ಣ ಗಡಿನಾಡ್ಯಾಜ್ಞಾಕೆ ಕಳಬಹುದೇ

ಹಾಲುಬಾನಾನಿಟ್ಟು ಬಾಲೈಯ್ಯನ ಸಾಕಿದೆ ಬಾ ಇಲ್ಲಿಗೆ ಎರವಾದ್ಯೋ-ತಾಳೀಕಟ್ಟೆ ಮಾರಾಯಗೋಲ ಹಿಡಕೊಟ್ಟೆ

ತುಪ್ಪಾ ಬಾನಾನಿಟ್ಟು ಪುತ್ರಯ್ಯನ ಸಾಕಿದ್ದೆ ಪುತ್ರ ಇಲ್ಲಿಗೆ ಎರವಾದ ತಾಳೀಕಟ್ಟಿ ಬೀರೇಶಗೋಲ ಹಿಡಕೊಟ್ಟೆ

ಬೀರೇಶಗೋಲ ಹಿಡಕೊಟ್ಟೆ ಅಂತೇಳಿ ಹಡದವ್ವ ಕಾಮಾಲೆ ಅಳುತಾಳೆ ಕಗ್ಗಾಕೆ ಕಲಿಬೀರೊ

ಲೆಗ್ಗಿಗೆ ಸುರತಾಳ

ಒಬು ತಾಯಿಗೊಳ್ಳೋ ಮಗಾನು-ನಿಂಗಣ್ಣಾನು ಗಡಿನಾಡ್ಯಾಜ್ಞಾಕೆ ಹೋಗಿದಾನೆ

ಸುಟ್ಟ ಸುಕ್ಕರವಾರೊ ಹುಟಿದೆಲ್ಲ ಶಿವನೇ ನಿಂಗ ಪಟ್ಟಾಣವೆಲ್ಲೂ ಹೊನುವಕ್ಕ ಿ ಅಂತೇಳಿ ತಂದೆ ಮಲ್ಲೆಪ್ಪ ಅಳುತಾನೆ

ಗಡಿನಾಡಿಗೆ ಮಗುನ ಕಳಬಹುದೆ ಅಂತೇಳಿ

ತಂದೆ ಮಲ್ಲೆಪ್ಪ ನುಡುದಾನೆ.

ಬತ್ತಿ ಬಾಯ್ ತೊಳಿಲಿಲ್ಲೋ ಬೆತ್ತುಲ ಕುದುರೆಯೇರಿ ದುಂದಿನೋನು ಮಯ್ಯ ಹೊರುಟಾನೆ

ದುಂದಿನೋನು ಮಯ್ಯ ಎಲ್ಲಿಗೆ ಹೊರುಟಾನೆ

ರಾಯರ ಪಾದಾಕೆ ಬರುತಾನೆ

ಅಣ್ಣಾನೆ ಬೀರೇರೊ ಮಕ್ಕಾಳ ಕಳುವಾನು ಏಳೂರು ಮಕ್ಕಾಳು ಕಳುದ್ಯಾನೆ-ಬೀರೇಶ ಮಕ್ಕಳ ನೋಡಿಕ್ಯಂತೋ ನಿಂತುದಾನೆ

ಆಚೆಗೆ ಮಕ್ಕಳ ಕಳುವಿ ಈಚೆಗೆ ತಮ್ಮುನ ಬೇಟಿ ಅಣ್ಣ ತಮ್ಮುರಿಗೆ ಸಮಬೇಟಿ-ಆದಾವೊ ತಮ್ಮ ಮಲ್ಲೆ ಯೊ ಕೇಳುತ್ತಾನೆ

BE

ಅಣ್ಣಾ ನಾದಾರೆ ನನ್ನಾ ಕರಸಾಕಿಲ್ಲಾ. ಅರಿಯಾದ ಮಗನೊ ಕರಸಹುದೇ-ಅಂತೇಳಿ ತಮ್ಮ ಮಲ್ಲೆಪ್ಪ ನುಡುದಾನೆ

ಬಂದಂತ ಯಾಜ್ಞಾವೋ ಯಾರಿಂದಂತೋರಿಲ್ಲ ಕುಂಜುರುದ ಅಳ್ಳಿ ನನಕಂದ-ನಿಂಗಣ್ಣ ಗಡಿನಾಡ್ಯ ಯಾಜ್ಞಾ ಗೆದ್ದೆ ಬಂದ

ಜ

ಗಡಿನಾಡ ಯಾಜ್ಞ ಗೆದು ಬಂದ ನನಮಗ

ಪರನಾಡ ತೋಳ ತಿರಿಬಂದ

ಅಣ್ಣ ತಮಾರಿಗೆ ಶರಣು ಸಂಪತ್ತಾಗಿ ತಮ್ಮುನ ಕರಕಂಡೆ ಬರುತಾನೆ-ಬೀರೇಶ ತಳಮನಿಗೆ ಅಲ್ಲಿ ಬರುತ್ತಾನೆ

ಬಂದ ತಮ್ಮಾಗೆ ಶರಣು ಸಂಪತ್ತಾಗಿ ಬೇಗಾನೆ ಅಡುಗೆ ಮಾಡುತಾರೆ ಅವರೀಗ ವುಡುಗರುಚ್ಚಾಯ ಕೊಡುತ್ತಾರೆ

ಏಳೂರ ಮಾನ್ಯರೇ ಶಿವುನೇ ಪಟ್ಟಣದಾಗ ಅಲ್ಲೊಂದ ರಾತ್ರಿ ಉಳುದಾರೆ ಮಲ್ಲೆ ಪ್ಪ ತಳಮನಿಗೆ ಆಗಿ ಬರುತ್ತಾನೆ

ತಳಮನಿಗೆ ಆಗೊ ಬಂದಾನೆ ಮಲ್ಲೆಪ್ಪ ನಿಂಗ ಆಗೊ ಹೊರುಟಾನೆ

ಏಳೂರ ತನ್ನುಗಳು ಕಳುವಾಕೆ ನಿಂಗಣ್ಣ ದೊಡ್ಡವ್ ಕಾಮಾಲೆ ಹೊರುಟಾಳೆ

ಅರುಸಾನೆ ನಿಂಗಣ್ಣ ಆನೆಯೇರಿದುನಲ್ಲಿ ಚೌಕಳಿ ಕಿವಿಯ ದಳವಾಯಿ ಏರಿದುನ ನಡುಸಣ್ಣನೇಯ ಮರಿಕುದುರೆ

ನಡುಸಣ್ಣನೇಯ ಮರಿಕುದುರೆಯೇರಿದುನ ಏಳೂರು ತಮ್ಮುಗಳ ಕಳುವಾಕೆ-ಹೊರಟಾನೆ ದೊಡ್ಡವ್ವ ಕಾಮಾಲೆ ನುಡುದಾಳೆ

ಏಳೂರು ದೇವರ ಕಾಳಗೆ

ಏಳೂರು ದೇವರ ಕಾಳಗ

ಕನಕ ಕಸ್ತೂರಿ ಮನಕೋಪ ಹಿಡಿಜೇಜಿ ದಳಕೆ ಸುಂಗಾರಿ ದಳವಾಯಿ-ನೀನಿಲ್ಲುದ ಮ್ಯಾಲೆ ಕೆಣುಕೋರಾರಪ್ಪೋ ಗಡಿಜಗಳ

*

ಕೆಣುಕೋರಾರಪ್ಪೋ ಗಡಿಜಗಳ ಅಂತೇಳಿ ಶಿವುನೇ ಕಾಮವ್ವ ನುಡುದಾಳೆ

ಗೋಪಿಕೆರೆಯಯ್ಯೋ ಸಾಸ ಬಲ್ಲಿದುನಲ್ಲೆ ಅವ್ರ ತಳಮನಿಗೆ ಅವ್ರ ಹೋಗುತ್ತಾರೆ ಮಾತೀಲಿ ಸಮರಂತ

ಈರ ಕಾಮಯ್ಯ

ಅವ್ರ ಸ್ಥಳ ಮನಿಗೆ ಅವುರೇ ಹೋಗುತ್ತಾರೆ ಈರ ಬಸವಣ್ಣ ಮಾತೀಲಿ ಸಮರಂತ ಅವ್ರ ತಳಮನಿಗೆ ಅವುರೇ ಹೋಗುತ್ತಾರೆ

ಕಂಸಾಗರದ

ಮಾತೀಲಿ ಸಮರಂತ

ಅವ್ರ ತಳಮನಿಗೆ ಅವ್ರ ಹೋದಾರು

ಎರೆನಾಡ ಸೀಮೆಗೆ ಗುರಿಯಿಟ್ಟ ಮುಗಳೀಯ ಎರೆನಾಡಗೊಬ್ಬ ದೊರಿಮಗ-ಈರದಿಮ್ಮಣ್ಣ ಪರನಾಡ ತೋಳ ತಿರುವಿ ಬಂದ

ಗಡಿನಾಡ ಯಾಜ್ಞಾ ಗೆದು ಬಂದ ತಿಮ್ಮಣ್ಣ

ಅವ್ರ ತಳಮನಿಗೆ ಅವ್ರ ಹೋದಾರೆ

ಏಳೂರ ಮಕ್ಕಳ ಕಳುಯಿದ ಕಾಮವ್ವ ಶಿವುದೇ ಪಟ್ಟುಣಕೆ ಬರುತಾಳೆ

ಇಲ್ಲಿಗೆ ಹರಹರಾ.

ಇಲ್ಲಿಗೆ ಶಿವಶಿವಾ

ಇಲ್ಲಿಗೆ ಈಸೊಂದು ಕಥೆಯು ಮುಗುದಾವೆ

ತಾಳೀಕಟ್ಟಿ ಹಿರಿಯಯ್ಯಾನ ಕಾಳುಗವೇ ಮುಗುದಾವು ನಮ್ಮ ಹಾಲುಮತದ ಜನಕೆ ಸಿದ್ದ ಬೀರೇಶ ಬೀರಲಿಂಗನದ್ದು ಕಥೆಗಳನ್ನು ನಡೆಸಿದೆವು ಬೀರೇಶನ ಕಥೆಯೇ ಮುಗುದಾವೆ

೧. ಆನವೇರಿ ದಿಬ್ಬ

೨. ಹೊನ್ನೆಬಾಗಿ ದಿಬ್ಬ

ಕೆಲವು ಸಳಗಳು

ಚನ್ನಗಿರಿ ತಾಲ್ಲೂಕಿಗೆ ಸೇರಿದ ಒಂದು ಗುಡ್ಡ. ತಾಳಿಕಟ್ಟೆ ಮತ್ತು ಆನವೇರಿ ಮಧ್ಯೆ ಇರುವ ಒಂದು

ಗುಡ್ಡ.

೩. ರಾಯರ ಪಾದ-ದಾಸರಹಟ್ಟಿ ಬಳಿ ಇದೆ.

೪. ಬಾಲನ ಕಣಿವೆ-ಬಾಳೇರಿ ಕಣಿವೆ ಹರಳಹಳ್ಳಿ ಮತ್ತು ಗೊಂದಿಹೊಸಹಳ್ಳಿ

೫. ಈರಾಪುರದ ಕಾವಲು

ಹಿಂಭಾಗ ಇದೆ.

ಶಿವನಿ ಮತ್ತು ಶಿವನಿ ರೈಲ್ವೆ ಸ್ಟೇಷನ್ ನಡುವೆ

ಇದೆ.

೬. ವಡನಾಳ ಕಣಿವೆ-ತಾಳೀಕಟ್ಟೆ ಆನವೇರಿ ನಡುವೆ ಇದೆ.

ಕಥೆ ನಡೆಯುವ ಜಿಲ್ಲೆಗಳು

೧. ಚಿತ್ರದುರ್ಗ

೨. ಶಿವಮೊಗ್ಗ

೩. ಚಿಕ್ಕಮಗಳೂರು

ತಾಳೀಕಟ್ಟೆಯಲ್ಲಿರುವ ಕುರುಬರ ಒಕ್ಕಲುಗಳು

೧. ಬ್ಯಾಲನ ಕುರುಬರು

೨. ಸಾವಂತನರು

೩. ಮನ್ನೆಗೊಲದವರು (ಅಮ್ಮಳ್ಳಿ)

೪. ಸಂಗಗೋಲ

೫. ಹಾಲನ ಕುರುಬರು

i) ಗುಮ್ಮನರು-ಗುಮ್ಮನನ್ನು ಹೊಡೆದು ತಮ್ಮ ಗೂಡೆ ಇಳಿಸಿದ್ದರಂತೆ ii) ತರ್ಕನರು ತರಗನ್ನು ಗುಡಿಸಿ ಗೂಡೆ ಇಳಿಸಿದ್ದರಂತೆ. ೬. ಕಪ್ಪಿನ ಕುರುಬರು (ಬೆಳ್ಳಿ ಗೋಲ)

೭. ಬಲ್ಲಾಳ ಕುರುಬರು ೮. ಗಂಡುಗೋಲದವರು

ಏಳೂರು ದೇವರ ಕಾಳಗ

೯. ಕ್ವಾಟೆ ಕುರುಬರು (ಕ್ವಾಟೆ ಮೇಲಿದ್ದವರು)

೧೦. ಹುಲೇನ ಕುರುಬರು (ಹುಲಿಬೋನಿನಲ್ಲಿದ್ದ ಮಗುವನ್ನು ಕರೆದುಕೊಂಡು ಬಂದವರು.)

೧೧. ತರೆನಾಗರ ಕುರುಬರು

ಈ ಮುಂತಾದ ಕುಲಗಳನ್ನು ಗಮನಿಸಿದರೆ ಬಹುವಾಗಿ ಯುದ್ಧ ಇಲ್ಲವೆ ಯೋಧರ ಜೀವನವನ್ನು ಬಿಂಬಿಸುತ್ತವೆ. ತಮ್ಮ ವೀರತೆಯನ್ನು ಬಹುಬಗೆಯಲ್ಲಿ ಪ್ರದರ್ಶಿಸುವಂತೆ ಇವು ಕಾಣುತ್ತವೆ.

೧. ತಾಳೀಕಟ್ಟೆ ಆನವೇರಿ

9.

ಊರುಗಳ ಹೆಸರು

7.9.

ದಂದೂರು

೧೩. ಹೊನ್ನೇ ಬಾಗಿ ೧೪. ಈರಾಪುರ

೩. ದುಮ್ಮಿ ೪. ಬನಿಹಟ್ಟಿ

೧೫. ವಡುನಾಳು

೫. ಪಾಡಿಗಟ್ಟೆ

೧೬.

ಬ್ಯಾಲನೂರು

ಬಂಕನ ಕಟ್ಟೆ

೧೭.

ಸಿಂಗೇನಹಳ್ಳಿ

2. ಶಿವುನೆ

೧೮.

ತುಪ್ಪದಹಳ್ಳಿ (ತುಪ್ಪಟದ ಹಳ್ಳಿ)

೯.

೮. ಅನ್ನೇನಳ್ಳಿ ಗಡೀಹಳ್ಳಿ

5.

೧೯. ಎಳಿಯಾಲು

90. ಆಲೂರು

೧೦.

ತಡುಗ

೨೧.

ಬೇಲೂರು

೧೧.

ಮುಗಳಿ

ಇಂದಿಗೂ ಇರುವ ಕೆಲವು ಆಚರಣೆಗಳು

ಈ ಕಾಳಗದ ಪದದಲ್ಲಿ ಬರುವ ಕೆಲವು ಪ್ರಸಂಗಗಳು ಇಲ್ಲವೇ ಅವುಗಳಿಂದಾದ ಪರಿಣಾಮಗಳಲ್ಲಿ ಕೆಲವು ಇಂದಿಗೂ ಆಚರಣೆಗಳಾಗಿ ಉಳಿದುಬಂದಿರುವ ಅಂಶಗಳು ಗಮನಾರ್ಹವಾದವುಗಳಾಗಿವೆ.

೧. ದುಮ್ಮಿ ಮತ್ತು ತಾಳೀಕಟ್ಟೆಗಳಲ್ಲಿ ಇಂದಿಗೂ ಹೆಣ್ಣು ಕೊಡುವುದಾಗಲಿ ತರುವು ದಾಗಲಿ ಇಲ್ಲ. ಮೊದಲು ಮನೆಗಳಿಗೆ ಪ್ರವೇಶವೂ ಇರಲಿಲ್ಲ. ಇತ್ತೀಚೆಗೆ ಊಟೋಪಚಾರಗಳಿವೆ. ಆದರೆ ಸಂಬಂಧ ಇಲ್ಲ.



೨. ನವಣೆ ಹೊಲದಲ್ಲಿ ಜಗಳ ಮಾಡಿದ್ದ ಕಾರಣ ದುಮ್ಮಿಯ ಜನಕ್ಕೆ ನವಣೆ ಒಂದು ನಿಶಿದ್ಧ ದವಸವಾಗಿದೆ.

೩. ಬ್ಯಾಲನ ಕುರುಬರಲ್ಲಿ ಇಂದಿಗೂ ಹಿರಿಯ ಮಗ ಅಥವಾ ಮಗಳಿಗೆ ಹನುಮ, ಹನುಮಿ ಎಂದು ನಾಮಕರಣ ಮಾಡುತ್ತಾರೆ.



ನವುಲಂಗ-ಪೇಟದಿಂದ ತಲೆಹಿಂದಕ್ಕೆ

ಬಿಟ್ಟ, ಕುಚ್ಚು

ತಪ್ಪ -ತಪ್ಪ

(ಗೆಜ್ಜೆ ಕಟ್ಟಿದಂತೆ)

ಲಾವಳ-ಸಾಲುಗಟ್ಟಿದ ಹಾಗೆ



ಸುರತಾಳ-ಸುರು ಸುರು ಮುಂದೆ

ಹೋಗುವವನು

ಅಂಬು-ಕತ್ತಿ, ಕಠಾರಿ

ಸಾಣಿಕಲ-ಇಸ್ತಿ

ದಸುರಿ ಬಟ್ಟೆ

ಕಲ್ಲೇವು-ಕತ್ತಿ

ಅನಕಂದೆ ಅನುಕಂಪ ಸ್ವಾತೆಕಲ್ಲು-ಒಂದು ರೀತಿ ಕಲ್ಲು

ನೆತ್ತಿಯ ಜುಂಜೆ-ತಲೆಯ ಹಿರುಬೂಲಿ-ಹಿರಿಯ ಹುಲಿ

ಕಿರುಬೂಲಿ-ಕಿರಿಯ ಹುಲಿ

ಹಸೆಕಲ್ಲು-ಕಾರ ಅರೆಯುವ ಕಲ್ಲು

ವಡ್ಡಿ-ನಾಲ್ಕು

ಸರಿ ಪುಲ್ಲಗೋರಿ-ಹೋರಿಕರು (ಹುಲ್ಲುತಿನ್ನುವ

ಹಾಲಾರದ ಬುತ್ತಿ-ಹಾಲು ಆರದಂತದ್ದು

ಗುಡಿಗೂಡೆ ಬಂಗಿ

ಅರಗಿಡುದು ಒಂದು ಕಡೆಯಿಂದ

ಹಣ್ಯಾರೆ ಹೂಡಿದ್ದಾರೆ

ದವುನಾವೊ-ಕತ್ತಿ, ಕಠಾರಿ ಮುಂತಾದ

ಸಾಮಗ್ರಿ

ಕಟ್ಟಲಗು ಕತ್ತಿ, ಗುರಾಣಿ

ದಾರುಂದಾವ-ಮನೆಯ

ಮುಂದಿನ ಭಾಗ

ಗಾಡಾನ ಬೇಗ !

ಅವತೋಳ ಔತಣ

ಎಳಗ-ಕುದುರೆ

ಒಕ್ಕಳಕ್ಕಿ-ಐವತ್ತು ಸೇರು

ಇಕ್ಕಾಳಾಲು-ನೂರು ಸೇರು ಹಾಲು ಪಣಿಗಂಧ-ಹಣೆಗಿಡುವ ಗಂಧ ಅಕ್ಕು ಅಕ್ಷತೆ ಕಾಳು ವಲುವೂತ-ವನದಾಡುತ್ತಾ ಸಾಮಂದ ಸಂಬಂಧ

ಅಯಬೋಗಿ-ಐಬೋಗಿ ರವಾದೀಲಿ-ರೋಮದಲ್ಲಿ

ಕಗ್ಗಾ ಜಗಳಕ್ಕೆ

ಹೋರಿ)

ಪಿಚಂಡಿ ಮೈ ತುಂಬಾ ಬಿಗಿಯುವುದು ಸಿರಿನ್ಯಾರೆ-ಸಿರಿ ನರೆ (ಹುಡುಗರೂ ಅಲ್ಲ ಮುದುಕರೂ ಅಲ್ಲ)

♡

ಈಲ-ಆಗ ತಾನೆ ಬರುವಂತಿದ್ದ ಮೀಸೆ ಮುಂದಿನೋನು ಅವಾಂತರದವನು

ಶಪ್ಪೆ-ಜೋಳದ ದಂಟುಗಳು

ಕೊಪ್ಪು-ಕಿವಿ ಮೇಲಿನ ತುದಿಯಲ್ಲಿ ಇಡುವ ಆಭರಣ (ಕಣಸ ಇದ್ದ ಹಾಗೆ ಇದೂ ಭಾಗ್ಯದ ಸಂಕೇತ)

ಸ ಭೆ-ಸಭೆ

ಕ್ವಾಲು- ಕೊರಡು

ಆಪಿನುಲ್ಲು-ಹಳ್ಳದಲ್ಲಿ ಬೆಳೆಯುವ ಒಂದು

ಬಗೆಯ ಹುಲ್ಲು. ಮನೆಗಳ ಚಾವಣಿಗಾಗಿ ಬಳಸುತ್ತಾರೆ (ಇಂದಿಗೂ)

ಬಾಬಾಲಿ, ಬಾವಲಿ (ಕಿವಿಯ ಆಭರಣ) ವ್ಯಾದ-ಹೋದ ಕೊಲ- ಕುಲ

ಸಕ್ಕೂರ- ಶುಕ್ರ (ಬೆಳ್ಳಿ ಚುಕ್ಕಿ) ಪಡಿಯ-ಧಾನ್ಯ (ಅಳತೆ) ರೈತ ರಕ್ತ ಸಿಂಗಾರಿ ಸಿಂಗಾಡಿ ಮೆಲ ಮೇಲೆ ಕಾಳು-ಕಾಳಗಕ್ಕೆ

buduce tees W

೧. ತಾಳೀಕಟ್ಟೆ ಕುಲ್ಲವ

. ವಕ್ತ ವಿವರ

ನಿಜನಾಮ ಗಂಗವ್ವ, ಊರು ತಾಳೀಕಟ್ಟೆ. ವಯಸ್ಸು ೭೫ ವರ್ಷಗಳು. ಜಾತಿ ಕುರುಬರು. ಗಂಡನ ಹೆಸರು ಗಂಗೂರು ಕೆಂಚಪ್ಪ, ಮಕ್ಕಳು ಎರಡು ಗಂಡು, ಕಸುಬು ಕೂಲಿ, ಹುಟ್ಟು ಕುರುಡಿಯಾದರೂ ಅಡಿಗೆಯಿಂದ ಕೃಷಿ ಸಂಬಂಧಿ ಕೆಲಸಗಳನ್ನೆಲ್ಲಾ ಮಾಡುತ್ತಾಳೆ. ಈಕೆ ತನ್ನ ಎಂಟು ವರ್ಷಕ್ಕಿಂತ ಮೊದಲೆ ಈ ಕಾಳಗದ ಪದವನ್ನು ಕಲಿತಿದ್ದಳಂತೆ. ಇದನ್ನು ಬ್ಯಾಲನೂರ ಕುರುಬರ ಜಿಜ್ಜಿ ಕೋಲಕಾರ ನಿಂಗಣ್ಣ ಎಂಬುವ ನಿಂದ ಕಲಿತಿದ್ದಳಂತೆ. ಆತ ಅವನ ತಾಯಿಯಿಂದ ಈ ಪದವನ್ನು ಕಲಿತಿದ್ದನಂತೆ.

L

ಇದರ ಜೊತೆಗೆ ಈಕೆ ಹಾಡುವ ಜನಪದ ಗೀತೆ, ಕಾವ್ಯಗಳೆಂದರೆ :

೧. ಸೋಬಾನೆ ಪದಗಳು (೧ಲ ಶಾಸ್ತ್ರಕ್ಕೆ ಸಂಬಂಧಪಟ್ಟ ೧ಲ ಪದಗಳು )

೨. ಗುಣಸಾಗು

೩. ಗುಳ್ಳವ್ವ ೪. ನೀರಳವ್ವ ೫. ತಾಳಕಟ್ಟದಮ್ಮ

೬. ಸತ್ಯ ಕಾಳಿಂಗರಾಯನ ಕತೆ

೭. ಮದಗದ ಕೆಂಚಮ್ಮ

೮. ಅಂತರಗಟ್ಟೆಯಮ್ಮನ ಕತೆ

೯. ಕರಿಯಮ್ಮನ ಕತೆ

೧೦. ತಾಳೀಕಟ್ಟೆ ಹಿರಿಯಯ್ಯನ ಹೊಗಳುವ ಹಾಡುಗಳು ಮುಂತಾದ ಜನಪದ ಕಾವ್ಯಗಳನ್ನು ಹಾಡುತ್ತಾಳೆ.

೨ ರಾಮಕ್ಕೆ

ಊರು ತಾಳೀಕಟ್ಟೆ, ವಯಸ್ಸು ೫೦ ವರ್ಷಗಳು. ಜಾತಿ ಕುರುಬರು, ಗಂಡನ ಹೆಸರು ಮೂಡುಬಾಗಲ ಮರಿಗೆಂಚಪ್ಪ. ಮಕ್ಕಳು ೫ ಹೆಣ್ಣು ೧ ಗಂಡು, ಕಸುಬು ರೈತಾಪಿಯ ಎಲ್ಲಾ ಕೆಲಸಗಳು. ಈಕೆ ತಾಳೀಕಟ್ಟೆ ಕುಲ್ಲವ್ವನ ಜೊತೆಗೆ ಮುಮ್ಮೇಳ ವಾಗಿ ಹಾಡುತ್ತಾಳೆ.

೩. ಸತ್ಯವ್ವ

ಊರು ತಾಳೀಕಟ್ಟೆ. ವಯಸ್ಸು ४೫ ಜಾತಿ ಕುರುಬರು. ಕಸುಬು ರೈತಾಪಿ

ಕೆಲಸ, ಅವಿವಾಹಿತೆ.

29

ಏಳೂರು ದೇವರ ಕಾಳಗ

೪. ಸಿದ್ದವ್ವ

ಊರು ತಾಳೀಕಟ್ಟೆ, ವಯಸ್ಸು ೫೫ ವರ್ಷಗಳು. ಜಾತಿ ಕುರುಬರು, ಗಂಡನ ಹೆಸರು ಛೇಲ್ಮನ್ ಬಸಪ್ಪ. ಮಕ್ಕಳು ೨ ಹೆಣ್ಣು ೨ ಗಂಡು. ಕಸುಬು ರೈತಾಪಿ ಕೆಲಸ

ಸಾಮಾನ್ಯವಾಗಿ ಈ ಇಬ್ಬರೂ ಹಿಮ್ಮೇಳದಲ್ಲಿ ಹಾಡುತ್ತಾರೆ. ಕೆಲವೊಮ್ಮೆ ತಾಳೀಕಟ್ಟೆ ಕುಲ್ಲವ್ವನ ಜೊತೆ ಈ ಮೂರು ಜನರಲ್ಲಿ ಯಾರು ಬೇಕಾದರೂ ಹಾಡು ತ್ತಾರೆ. ಉಳಿದಿಬ್ಬರು ಹಿಮ್ಮೇಳವಾಗಿರುತ್ತಾರೆ.

ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತಂತೆ ಹೇರಳವಾದ ಕಾವ್ಯಗಳು ಕಂಡುಬರುತ್ತವೆ. ಜನಾಂಗದ ವೀರಪುರುಷರಿಗೆ ಸಂಬಂಧಪಟ್ಟ ವೀರಕಾವ್ಯಗಳು ಇವೆ. ಅನೇಕ ಬಗೆಯ ತ್ಯಾಗ ಬಲಿದಾನದ ಕಥೆಗಳು ಇವೆ. ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆ ವಿಧಿಗಳಲ್ಲಿ ಈ ಕಾವ್ಯಗಳನ್ನು ಪವಿತ್ರ ಕಾವ್ಯಗಳೆಂದು ಪರಿಗಣಿಸಿ, ಉಳಿಸಿ ಕೊಂಡು ಬಂದ ಪರಂಪರೆ ಇದೆ. ಈ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಅಂಶಗಳು ಸೇರಿರುತ್ತವೆ. ಇಂತಹ ಒಂದು ಶ್ರೇಷ್ಠ ಕಾವ್ಯಗಳ ಸಾಲಿಗೆ ಏಳೂರು ದೇವರ ಕಾಳಗ" ಕೂಡ ಸೇರಿರುತ್ತದೆ. ತರುಣ ವಿದ್ವಾಂಸ ರಾದ ಶ್ರೀ ರಾಜಪ್ಪ ದಳವಾಯಿಯವರು ಕೆಲವು ವರ್ಷಗಳ ಹಿಂದೆ ಈ ಕಾವ್ಯದ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಸಾಂಸ್ಕೃತಿಕ ಮಹತ್ವದ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಅದರ ಸಂಪ್ರದಾಯವನ್ನು ಗುರುತಿಸಬೇಕೆಂದು ಅವರೊಡನೆ ನಾನು ಮಾತನಾಡಿದ್ದೆ. ಶ್ರೀಯುತರು ಈ ಕಾವ್ಯದ ಮೂಲ

ಚೂಲಗಳನ್ನೆಲ್ಲ ಹುಡುಕಿ ಸಾಧ್ಯ ವಾದ ಮಟ್ಟಿಗೂ ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

QURTON

S

ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ವೀರರನ್ನು ಕುರಿತಂತೆ ಹೇರಳವಾದ ಕಾವ್ಯಗಳು ಕಂಡುಬರುತ್ತವೆ. ಜನಾಂಗದ ವೀರಪುರುಷರಿಗೆ ಸಂಬಂಧಪಟ್ಟ ವೀರಕಾವ್ಯಗಳು ಇವೆ. ಅನೇಕ ಬಗೆಯ ತ್ಯಾಗ ಬಲಿದಾನದ ಕಥೆಗಳು ಇವೆ. ಧಾರ್ಮಿಕ ಸಂಪ್ರದಾಯಗಳಲ್ಲಿ ಆಚರಣೆ ವಿಧಿಗಳಲ್ಲಿ ಈ ಕಾವ್ಯಗಳನ್ನು ಪವಿತ್ರ ಕಾವ್ಯಗಳೆಂದು ಪರಿಗಣಿಸಿ, ಉಳಿಸಿ ಕೊಂಡು ಬಂದ ಪರಂಪರೆ ಇದೆ. ಈ ಕಾವ್ಯಗಳಲ್ಲಿ ಧಾರ್ಮಿಕ ಅಂಶಗಳ ಜೊತೆಗೆ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ಅಂಶಗಳು ಸೇರಿರುತ್ತವೆ. ಇಂತಹ ಒಂದು ಶ್ರೇಷ್ಠ ಕಾವ್ಯಗಳ ಸಾಲಿಗೆ ಏಳೂರು ದೇವರ ಕಾಳಗ" ಕೂಡ ಸೇರಿರುತ್ತದೆ. ತರುಣ ವಿದ್ವಾಂಸ ರಾದ ಶ್ರೀ ರಾಜಪ್ಪ ದಳವಾಯಿಯವರು ಕೆಲವು ವರ್ಷಗಳ ಹಿಂದೆ ಈ ಕಾವ್ಯದ ಬಗ್ಗೆ ನನ್ನೊಡನೆ ಪ್ರಸ್ತಾಪಿಸಿದ್ದರು. ಸಾಂಸ್ಕೃತಿಕ ಮಹತ್ವದ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹಿಸಿ, ಅದರ ಸಂಪ್ರದಾಯವನ್ನು ಗುರುತಿಸಬೇಕೆಂದು ಅವರೊಡನೆ ನಾನು ಮಾತನಾಡಿದ್ದೆ. ಶ್ರೀಯುತರು ಈ ಕಾವ್ಯದ ಮೂಲ ಚೂಲಗಳನ್ನೆಲ್ಲ ಹುಡುಕಿ ಸಾಧ್ಯ ವಾದ ಮಟ್ಟಿಗೂ ಸಮಗ್ರವಾಗಿ ಹಾಗೂ ವೈಜ್ಞಾನಿಕವಾಗಿ ಸಂಗ್ರಹಕಾರ್ಯವನ್ನು ನಡೆಸಿದ್ದಾರೆ. ಈ ಕಾರ್ಯಕ್ಕಾಗಿ ಅವರನ್ನು ನಾನು ಅಭಿನಂದಿಸುತ್ತೇನೆ.

QURTON

S